ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 11 ಮಾರ್ಚ್ 16, 1980 40 ಪೈಸೆ

ಕರ್ನಾಟಕ ಸರಕಾರದ ನಿರ್ಜೀವ ಬಜೆಟ್

ಕರ್ನಾಟಕ ರಾಜ್ಯದ 1980-81ರ ಸಾಲಿನ ಬಜೆಟನ್ನು ಹಣಕಾಸಿನ ಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರು 10-3-80ರಂದು ವಿಧಾನಸಭೆಯಲ್ಲಿ ಮಂಡಿಸಿದ್ದಾರೆ. ಇದೊಂದು ಉಪ್ಪು, ಹುಳಿ, ಖಾರ ಯಾವುದೂ ಇಲ್ಲದ ನಿಸ್ಸಾರವಾದ ನಿರ್ಜೀವ ಬಜೆಟ್ ಆಗಿರುತ್ತದೆಂದು ಧಾರಾಳವಾಗಿ ಹೇಳಬಹುದು. ಅದರಲ್ಲಿ ಸುಮಾರು 80 ಕೋಟಿ ರೂಪಾಯಿನಷ್ಟು ಆದಾಯಕ್ಕಿಂತ ಅಧಿಕ ವೆಚ್ಚ ಸೂಚಿಸಿರುವುದು ಮತ್ತು ಜನಸಾಮಾನ್ಯರ ಕೆಲವು ನಿತ್ಯೋಪಯೋಗಿ ವಸ್ತುಗಳ ಮೇಲೆ ಹಾಕಿರುವ ಅಧಿಕ ತೆರಿಗೆಗಳು ಬೆಲೆ ಏರಿಕೆಗೂ, ಹಣದುಬ್ಬರಕ್ಕೂ ಪ್ರೋತ್ಸಾಹಕಾರಿಯಾಗಿದ್ದು ಜನತೆಯ ಜೀವನ ಮಟ್ಟವನ್ನು ಕುಗ್ಗಿಸಲಿವೆ. ಸಾಮಾನ್ಯ ಜನತೆಗೆ ಅನುಕೂಲ ಮಾಡುವ ವಾಸ್ತವ ಯೋಜನೆ ಯಾವುದೂ ಇದರಲ್ಲಿಲ್ಲ. ಮಾಮೂಲಿನ ಕ್ರಮಗಳನ್ನಷ್ಟೇ ಪಟ್ಟಿ ಮಾಡಿ ತೋರಿಸಲಾಗಿದೆ.

ಸೈಕಲಿನ ಮೇಲಿನ ಮಾರಾಟ ತೆರಿಗೆಯನ್ನು ರದ್ದುಪಡಿಸಿರುವುದು ಸ್ವಾಗತಾರ್ಹವಾದರೂ, ಅಡಿಗೆಗೆ ಉಪಯೋಗಿಸುವ ಎಣ್ಣೆಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಿರುವುದು ಖಂಡನೀಯವಾಗಿದೆ.

ಸಂಪಾದಕೀಯ

ರಾಜ್ಯದ ಸ್ವೈಫಂಡರಿ ಪದವೀಧರರು ಕಳೆದ ಕೆಲವು ತಿಂಗಳಿಂದ ಹೋರಾಟ ಮಾಡುತ್ತಿದ್ದಾರೆ. ಆದರೆ ಅವರ ಬಗ್ಗೆ ಬಜೆಟ್ ಮೌನತಾಳಿದೆ. ರಾಜ್ಯದ ಇತರ ಲಕ್ಷಾಂತರ ನಿರುದ್ಯೋಗಿಗಳಿಗೂ ಯಾವ ಪರಿಹಾರವನ್ನೂ ಸರ್ಕಾರ ಸೂಚಿಸಿಲ್ಲ.

ರಾಜ್ಯದ ಕೈಗಾರಿಕಾ ಅಭಿವೃದ್ಧಿಯ ಬಗ್ಗೆ ಮೈಸೂರು ಕಾಗದ ಕಾರ್ಖಾನೆ ಒಂದನ್ನು ಬಿಟ್ಟರೆ ಇತರ ಯಾವ ಸೂಚನೆಯೂ ಇಲ್ಲ. ವಿಜಯನಗರ ಉಕ್ಕಿನ ಕಾರ್ಖಾನೆಯ ಭವಿಷ್ಯವು ನಿರಾಶಾದಾಯಕವಾಗಿದೆ.

ವ್ಯವಸಾಯ ಅಭಿವೃದ್ಧಿಗೆ ಸೂಚಿಸಿರುವ ಕ್ರಮಗಳು ಪರಿಣಾಮಕಾರಿಯಾಗಿರುವುದಿಲ್ಲ. ಲಕ್ಷಾಂತರ ಭೂರಹಿತರಿಗೆ ಜಮೀನು ಕೊಡುವ ಸೂಚನೆಯಾಗಲಿ, ಕೃಷಿ ಕೆಲಸಗಾರರಿಗೆ ಅಧಿಕ ವೇತನ, ಪಶ್ಚಿಮ ಬಂಗಾಳದ ಸರಕಾರ ತಂದಿರುವ ಪೆನ್‌ಷನ್ ಯೋಜನೆ ರೀತಿಯ ಕ್ರಮವಾಗಲಿ ಇಲ್ಲಿಲ್ಲ. ಕಾರ್ಮಿಕರೂ, ರೈತರೂ, ಕೃಷಿ ಕೆಲಸಗಾರರೂ, ಇತರ ದುಡಿಯುವ ವಿಭಾಗಗಳಿಗೆ ಅನುಕೂಲವಾದ ಯಾವ ಕ್ರಮವನ್ನೂ ಮಂತ್ರಿಗಳು ಸೂಚಿಸದಿರುವುದು ಗಮನಾರ್ಹವಾಗಿದೆ.

(ಕಡೆಯ ಪುಟ ನೋಡಿ)

ದೀರ್ಘ ಹೋರಾಟದ ಯಶಸ್ವಿ ಮುಕ್ತಾಯ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿರುವ ಗುತ್ತೇದಾರಿ ಬಂಡವಾಳಶಾಹಿ "ಸೋಮಾನಿ"ಯವರ ಮಾಲಕತ್ವದಲ್ಲಿರುವ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲಿನ ಎಲ್ಲಾ ವಿಭಾಗಗಳಿಗೆ ಸೇರಿದ ಸುಮಾರು ಐದು ಸಹಸ್ರ ಕಾರ್ಮಿಕರು 1979 ನವೆಂಬರ 22 ರಿಂದ ಮುಷ್ಕರದ ಹಾದಿಯನ್ನು ಹಿಡಿದಿದ್ದರು. ಕಳೆದವಾರದ ಕೊನೆಯಲ್ಲಿ ರಾಜ್ಯದ ಕಾರ್ಮಿಕ ಸಚಿವರ ಸಮ್ಮುಖದಲ್ಲಿ ಕಾರ್ಮಿಕ ಮತ್ತು ಮಾಲಕರ ಪ್ರತಿನಿಧಿಗಳೊಳಗೆ ಒಪ್ಪಂದವಾಗಿ, ಇದೀಗ ಸುಮಾರು 110 ದಿನಗಳ ಕಾಲದ ಮುಷ್ಕರವು ಕೊನೆಗೊಂಡಿದೆ. ದೀರ್ಘಕಾಲದ ಐಕ್ಯಹೋರಾಟದ ಪರಿಣಾಮವಾಗಿ ಕಾರ್ಮಿಕರಿಗೆ ಅನೇಕ ಸವಲತ್ತುಗಳು ಮತ್ತು ಹೆಚ್ಚಿನ ವೇತನ ದೊರೆಯುವಂತಾಗಿದೆ. ಇಷ್ಟೊಂದು ಮಂದಿ ಕಾರ್ಮಿಕರು ಸೇರಿದಂತೆ ದೊಡ್ಡ ಉದ್ಯಮವೊಂದರಲ್ಲಿ ಇಷ್ಟು ದೀರ್ಘಕಾಲದ ಹೋರಾಟವು ನಡೆದುದು ರಾಜ್ಯದ ಉತ್ತರ ಭಾಗದಲ್ಲಿ ಇದೇ ಮೊದಲನೆದಾಗಿದೆ. ಬೇರೆ ಬೇರೆ ಕಾರ್ಮಿಕ ಸಂಘಟನೆಗಳ ಸಂಯುಕ್ತ ನಾಯಕತ್ವದಲ್ಲಿ ನಡೆದ ಈ ಯಶಸ್ವಿ ಹೋರಾಟಕ್ಕೆ ಮುಖ್ಯವಾಗಿ ಸಿ ಐ ಟಿ ಯು ವಿನ ಸಂಘಟನೆಯು ಹೆಚ್ಚಿನ ಮುಂದಾಳುತ್ವವನ್ನಿತ್ತಿದೆ.

1978ರಲ್ಲೆ ಮಾಲಕರಿಗೆ ಬೇಡಿಕೆಗಳನ್ನು ಕಳುಹಿಸಿದ್ದರೂ, ಅವರಿಂದ ಏನೇನೂ ಪ್ರತಿಕ್ರಿಯೆ ಇಲ್ಲದಿದ್ದುದರ ಪರಿಣಾಮವಾಗಿ, ಕಾರ್ಮಿಕರು ಕೊನೆಗೆ ಮುಷ್ಕರದ ಹಾದಿಯನ್ನು ಅನುಸರಿಸಬೇಕಾಯ್ತು. ಸರಕಾರ ಮತ್ತು ಮಾಲಕರ ಮೇಲೆ ಒತ್ತಾಯ ತರಲು ಆಗಿದ್ಧಾಗ್ಗೆ ಹೋರಾಟವನ್ನು ತೀವ್ರಗೊಳಿಸಲಾಗಿತ್ತು. ಈ ಹೋರಾಟದ ಪರಿಣಾಮ ಕಾರ್ಮಿಕ ನಗರ ದಾಂಡೇಲಿ ಮಾತ್ರವೇ ಅಲ್ಲ ಸುತ್ತಮುತ್ತಲೂ ಬೀರತೊಡಗಿತು. ಹೋರಾಟಕ್ಕೆ ರಾಜ್ಯದಾದ್ಯಂತ ಬೆಂಬಲ ದೊರೆಯಿತು. ಅತೀವ ಕಷ್ಟನಷ್ಟಗಳನ್ನು ಅನುಭವಿಸಿ, ಪಾತ್ರೆಸಾಮಾನುಗಳನ್ನೆಲ್ಲಾ ಮಾರಿ, ಸಾಲ ಮಾಡಿ ಜೀವಿಸಬೇಕಾಗಿ ಬಂದರೂ ಧೃತಿಗೆಡದೆ ಮಾಡಿದ ಹೋರಾಟದ ಫಲವಾಗಿ ಯಶಸ್ಸು ದೊರೆಯುವಂತಾಯಿತು.

ಅತೀ ವಿಶಾಲ ತಳಹದಿಯ ಒಗ್ಗಟ್ಟಿನ, ದೀರ್ಘಕಾಲದ ಮತ್ತು ಶಾಂತಿಯುತವಾದ ಹೋರಾಟವು ಇದಾಗಿದೆ. ಒಗ್ಗಟ್ಟಿನ ಪರಿಣಾಮವಾಗಿ ಕಾರ್ಖಾನೆಯ ಸ್ಟಾಫಿನಿಂದ ಮೊದಲ್ಗೊಂಡು ಕಂಟ್ರಾಕ್ಟ್ ಕಾರ್ಮಿಕರ ವರೆಗೆ ಯಾರೂ ಕೆಲಸಕ್ಕೆ ಹೋಗದಿದ್ದುದು ಶ್ಲಾಘನೀಯ. ಏನೇನೂ ಭ್ರಮೆಯನ್ನಿಟ್ಟುಕೊಳ್ಳದೆ, ತಮ್ಮ ಸ್ವಂತ ಶಕ್ತಿಯಿಂದ ಕಾರ್ಮಿಕರು ನಡೆಸಿದ ಹೋರಾ

(ಕಡೆಯ ಪುಟ ನೋಡಿ)

ಸಿ. ಐ. ಟಿ. ಯು. ಸಂಘಗಳಿಂದ ಸೌಹಾರ್ದ ಬೇಡಿಕೆ ದಿನಾಚರಣೆ

ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿ ತಾ. 2-3-80 ರಂದು ಸಭೆಸೇರಿ ತೀರ್ಮಾನಿಸಿದಂತೆ, ರಾಜ್ಯದ ಕಾರ್ಮಿಕರ ಹೋರಾಟಗಳ ಬಗ್ಗೆ ಹಾಗೂ ಜೀವನಾವಶ್ಯಕ ವಸ್ತುಗಳ ಅಭಾವ, ಬೆಲೆ ಏರಿಕೆ ಬಗ್ಗೆ ಸರ್ಕಾರದ ಗಮನ ಸೆಳೆಯಲು ರಾಜ್ಯಾದ್ಯಂತ ತಾ. 12-3-80 ರಂದು ಬೇಡಿಕೆ ದಿನಾಚರಣೆ ಆಚರಿಸಬೇಕೆಂದು ಕರೆ ನೀಡಿದ್ದನ್ನು ಅನುಸರಿಸಿ ಬೆಂಗಳೂರಿನಲ್ಲಿ ಕಾರ್ಯಕ್ರಮ ನಡೆಯಿತು.

ಬೆಳಿಗ್ಗೆ ಹತ್ತು ಗಂಟೆಗೆ ವಿಧಾನ ಸೌಧದ ಎದುರು ಪ್ರಾರಂಭವಾದ ಸಾಮೂಹಿಕ ಧರಣಿ ಸತ್ಯಾಗ್ರಹದಲ್ಲಿ ನೂರಕ್ಕೂ ಹೆಚ್ಚು ಕಾರ್ಮಿಕರು, ಕಾರ್ಮಿಕ ಮುಖಂಡರು ಭಾಗವಹಿಸಿದ್ದರು. ಸಂಜೆ ಆರು ಗಂಟೆಗೆ ಧರಣಿಯನ್ನು ಮುಗಿಸಿ, ಸಿ. ಪಿ. ಐ. (ಎಂ) ಮುಖಂಡ ಕಾಂ. ಎನ್. ಎಲ್. ಉಪಾಧ್ಯಾಯರ ನೇತೃತ್ವದಲ್ಲಿ ಆರು ಜನರ ನಿಯೋಗವೊಂದು ಕಾರ್ಮಿಕ ಮಂತ್ರಿ ಸಿ. ಎಂ. ಇಬ್ರಾಹಿಂರವರನ್ನು ಭೇಟಿಮಾಡಿ ಬೇಡಿಕೆಗಳನ್ನು ಮಂಡಿಸಿದರು. ವಿವಿಧ ಹೋರಾಟಗಳ ಬಗ್ಗೆ ಚರ್ಚೆ ನಡೆದು "ಸಂಯುಕ್ತ ಕರ್ನಾಟಕ" ಪತ್ರಿಕೆಯನ್ನು ಮತ್ತೆ ಪ್ರಾರಂಭಿಸುವ ದಿಸೆಯಲ್ಲಿ ಮಾತುಕತೆ ನಾಳೆಯಿಂದ ಪ್ರಾರಂಭಿಸುತ್ತಿರುವುದಾಗಿಯೂ ಹಾಗೂ ಅದನ್ನು ಶೀಘ್ರವಾಗಿ ಬಗೆಹರಿಸುವುದಾಗಿ ಸರಕಾರ ಭರವಸೆ ನೀಡಿತು.

ಶಾತಗುಣಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಫೈಲು ಮಾಲೀಕರ ಕೈವಾಡದಿಂದಾಗಿ ಅರಣ್ಯ ಇಲಾಖೆಯಲ್ಲಿ ನಾಪತ್ತೆಯಾಗಿತ್ತು. ಅದನ್ನು ಮತ್ತೆ ಪೂರ್ಣಗೊಳಿಸಿ ಕೇಂದ್ರ ಸರಕಾರದ ಒಪ್ಪಿಗೆಗಾಗಿ ಕಳಿಸಲಾಗುವುದೆಂದು ಕಾರ್ಮಿಕ ಮಂತ್ರಿಗಳು ಹೇಳಿದರು. ಸ್ಟೈಫಂಡರೀ ಪದವೀಧರರು ಮತ್ತು ಚಿಟ್ಟಳ್ಳಿ ಸಂಶೋಧನಾ ಕೇಂದ್ರದ ಕೆಲಸಗಾರರ ಸಮಸ್ಯೆಗಳನ್ನು ಪರಿಹರಿಸಲು ಶೀಘ್ರವಾಗಿ ಕ್ರಮವಹಿಸುವುದಾಗಿ ತಿಳಿಸಿದರು.

ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ. ಎನ್. ಎಲ್. ಉಪಾಧ್ಯಾಯ ವಹಿಸಿದ್ದರು. ಪ್ರಾರಂಭದಲ್ಲಿ ಶಾತಗುಣಿ ಎಸ್ಟೇಟ್ ಕಾರ್ಮಿಕರ ಸಂಘದ ಕಾರ್ಯದರ್ಶಿ ಕಾಂ. ಜಗನ್ನಾಥ್ ಪರಿಸ್ಥಿತಿಯನ್ನು ವಿವರಿಸಿ ಸರಕಾರ ಮತ್ತು ಆಡಳಿತ ವರ್ಗವನ್ನು ಕಟುವಾಗಿ ಟೀಕಿಸಿದರು.

ಸಂಯುಕ್ತ ಕರ್ನಾಟಕ ನೌಕರರ ಪರವಾಗಿ ರಾಜ್ಯದ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಿ. ಕೆ. ಸತ್ಯರವರು, ಯಾವ ಮುನ್ಸೂಚನೆಯೂ ಇಲ್ಲದೆ ಪತ್ರಿಕೆಯನ್ನು ಬಂದು ಮಾಡಿ ನೌಕರರನ್ನು ಬೀದಿಪಾಲು ಮಾಡಿರುವ ಮಾಲೀಕರ ಧೋರಣೆಯನ್ನು ಖಂಡಿಸಿದರು.

ಕೇವಲ ರೂ. 150 ಸ್ಟೈಫಂಡ್ ಕೊಟ್ಟು ಐದು ನೂರು ರೂಪಾಯಿ ಸಂಬಳದವರು ಮಾಡುವ ಕೆಲಸಕ್ಕಿಂತ ಹೆಚ್ಚು ಕೆಲಸ ಮಾಡಿಸಿಕೊಂಡು, ಸರಕಾರವೇ ಶೋಷಣೆಗೆ ನಿಂತಿರುವುದನ್ನು ಖಂಡಿಸಿದ ರಾಜ್ಯ ಸ್ಟೈಫಂಡರೀ ಪದವೀಧರರ ಸಂಘದ ಉಪಾಧ್ಯಕ್ಷ ಜಿ. ವಿ. ರೆಡ್ಡಿಯವರು ಸ್ಟೈಫಂಡ್ ಹಣವನ್ನು ರೂ 300 ಮಾಡಿದರೆ ಕನಿಷ್ಟ ಬದುಕನ್ನಾದರೂ ನಡೆಸಲು ಸಾಧ್ಯ ಎಂದರು.

ಕನಿಷ್ಟ ಕೂಲಿ ರೂ. 8 ಕೇಳಿದ್ದಕ್ಕಾಗಿ ಚಿಟ್ಟಳ್ಳಿ ಸಂಶೋಧನಾ ಕೇಂದ್ರದ 120 ಜನ ನೌಕರರನ್ನು ವಜಾಮಾಡಿರುವ ಕೇಂದ್ರ ಸರಕಾರದ ಕ್ರಮವನ್ನು ಪ್ರಶ್ನಿಸಿದ ಜಿ. ರಾಮುರವರು ಹೋರಾಟವನ್ನು ಕೊನೆಯವರೆಗೂ ನಡೆಸುವುದಾಗಿ ಹೇಳಿದರಲ್ಲದೆ, ಇದೇ ಪರಿಸ್ಥಿತಿ ಮುಂದುವರಿದರೆ ಐ ಸಿ ಹೆಚ್ ಆರ್. ಸಂಶೋಧನಾ ಕೇಂದ್ರದ ಬೆಂಗಳೂರು ಶಾಖೆಯಲ್ಲೂ ಮುಷ್ಕರ ನಡೆಸುವುದು ಅನಿವಾರ್ಯವಾಗುತ್ತದೆ ಎಂದು ಸರಕಾರವನ್ನು ಎಚ್ಚರಿಸಿದರು.

ರಾಜ್ಯ ಸಿ. ಐ ಟಿ. ಯು. ನ ಕಾರ್ಯದರ್ಶಿ ವಿ. ಜೆ ಕೆ. ನಾಯರ್‌ರವರು ಮಾತನಾಡಿ ಸದ್ಯದ ಆರ್ಥಿಕ ಸಂಕಷ್ಟಗಳಾದ ಹಣದುಬ್ಬರ, ಬೆಲೆಏರಿಕೆ, ಅಗತ್ಯ ವಸ್ತುಗಳ ಅಭಾವಕ್ಕೆ ಬಂಡವಾಳಶಾಹಿಗಳ ಕೈವಾಡ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ವಿವರಿಸಿ ಯುಗಾದಿ ಹಬ್ಬದ ವೇಳೆಗೆ ಸಾರ್ವಜನಿಕರಿಗೆ ಕನಿಷ್ಟ ಐದು ಕೆಜಿ. ಸಕ್ಕರೆ, ಸಾಕಷ್ಟು ಸೀಮೆಎಣ್ಣೆ ಮುಂತಾದ ಅಗತ್ಯ ವಸ್ತುಗಳನ್ನು ಒದಗಿಸಬೇಕೆಂಬ ಸಿ. ಐ. ಟಿ. ಯು. ಬೇಡಿಕೆಯನ್ನು ಉದಾಹರಣೆಗಳ ಸಹಿತ ಸಮರ್ಥಿಸಿದರು.

ಮೈಕೋ ಕಾರ್ಮಿಕರ ಸಂಘದ ಸಹ ಕಾರ್ಯದರ್ಶಿ ಫಿಲಿಪ್ಸ್ ನರೋನರವರು ಮಾತನಾಡಿ ಬೆಂಗಳೂರಿನ ಕಾರ್ಮಿಕರ ಸೌಹಾರ್ದ ಬೆಂಬಲದಿಂದ ಮೈಕೋ ಕಾರ್ಮಿಕರ ಹೋರಾಟ ಯಶಸ್ವಿಯಾಯಿತು, ಅದೇ ರೀತಿ ನಾವು ಈಗ ಹೋರಾಟದಲ್ಲಿರುವ ವಿವಿಧ ಕಾರ್ಮಿಕರಿಗೆ ಬೆಂಬಲ ನೀಡಲು ಬಂದಿದ್ದೇವೆ, ಸಿ. ಐ. ಟಿ. ಯು. ನಾಯಕತ್ವದ ಬಗ್ಗೆ ಅನೇಕರು ಅನೇಕ ರೀತಿಯ ಅಪಪ್ರಚಾರಗಳನ್ನು ಮಾಡಿದರೂ ಕಾರ್ಮಿಕರಿಗಾಗಿ ನಿಜವಾದ ಹೋರಾಟವನ್ನು ನಡೆಸುತ್ತಿರುವವರು ಸಿ. ಐ ಟಿ. ಯು. ಮತ್ತು ಸಿ. ಪಿ. ಐ. (ಎಂ) ನಾಯಕತ್ವ ಮಾತ್ರ ಎಂದರು.

ರಾಜ್ಯ ಸಿ ಐ. ಟಿ. ಯು. ಅಧ್ಯಕ್ಷ ಸೂರ್ಯನಾರಾಯಣರಾವ್ ಮಾತನಾಡುತ್ತಾ, ಕಾರ್ಮಿಕ ಮಂತ್ರಿಗಳಿಗೂ ಸಿ. ಐ. ಟಿ. ಯು. ಪ್ರತಿನಿಧಿಗಳಿಗೂ ನಡೆದ ಚರ್ಚೆಯನ್ನು ವಿವರಿಸಿದರು.

(ಕಡೆಯ ಪುಟ ನೋಡಿ)

ಕಾಫಿ ಕ್ಯೂರಿಂಗ್ ಕಾರ್ಮಿಕರ ಮುಷ್ಕರ ಅನಿವಾರ್ಯ

ಪ್ರತಿ ವರ್ಷವೂ ಸುಮಾರು 132 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ಗಳಿಸಲು ಮುಖ್ಯ ಪಾತ್ರವಹಿಸುತ್ತಿರುವ ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಬೆವರು ಸುರಿಸಿ ಅಹೋರಾತ್ರಿ ದುಡಿಯುತ್ತಿರುವ ಒಬ್ಬ ನೌಕರನಿಗೆ ಸಿಗುತ್ತಿರುವ ಕನಿಷ್ಟ ವೇತನ ಮಾಹೆಯಾನ ಕೇವಲ ರೂ 197-50 ಗಳು ಮತ್ತು ಕಾಫಿ ಸಂಸ್ಕರಣೆ ಮಾಡುವ ಒಬ್ಬ ಮಹಿಳಾ ಕಾರ್ಮಿಕಳಿಗೆ ದಿನಕೂಲಿ ರೂಪಾಯಿ 2-50 ರಿಂದ ರೂಪಾಯಿ 3ರ ವರೆವಿಗೆ ಮಾತ್ರ. ದಿನಬಳಕೆ ವಸ್ತುಗಳ ಬೆಲೆಗಳು ಏರುತ್ತಿರುವ ಈ ಸಂದರ್ಭದಲ್ಲಿ ಮೇಲ್ಕಂಡಂತೆ ಸಿಗುತ್ತಿರುವ ಸಂಬಳದಿಂದ ತಿಂಗಳಲ್ಲಿ 15 ದಿನಗಳು ಕೂಡ ಒಬ್ಬ ಮನುಷ್ಯನಿಗೆ ಜೀವನ ನಡೆಸಲು ಸಾಧ್ಯವಾಗುವುದಿಲ್ಲ ಎಂಬ ವಿಚಾರ ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಎಲ್ಲಾ ಕಾರಣಗಳಿಂದ ಹಾಲಿ ಇರುವ ತಿಂಗಳ ಸಂಬಳ ಮತ್ತು ದಿನಕೂಲಿಯ ಮೇಲೆ ಶೇಕಡ 100ರಿಂದ 140ರವರೆವಿಗೆ ವೇತನ ಹೆಚ್ಚಿಸಬೇಕೆಂದು ಸಂಘದ ಬೇಡಿಕೆ ಪತ್ರದಲ್ಲಿ ಕೇಳಿಕೊಳ್ಳಲಾಯಿತು. ಈ ಬೇಡಿಕೆ ಪತ್ರ ಆಡಳಿತ ಮಂಡಳಿಗೆ ತಲುಪಿ ಒಂದು ತಿಂಗಳವರೆವಿಗೆ ಸಂಘಕ್ಕೆ ಯಾವ ಉತ್ತರವನ್ನೂ ಕೊಡದೆ, ತಾತ್ಸಾರ ಮನೋಭಾವದಿಂದ ತಾ. 19-12-1979 ರಂದು ಸಂಘದ ಪ್ರತಿನಿಧಿಗಳನ್ನು ಚಿಕ್ಕಮಗಳೂರಿನಲ್ಲಿರುವ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ನಿನ ಕಛೇರಿಯಲ್ಲಿ ಪ್ರಥಮವಾಗಿ ಮಧ್ಯಾಹ್ನ 3 ಘಂಟೆಗೆ ಸಭೆಗೆ ಕರೆಯಲಾಯಿತು. ಅಲ್ಲಿಂದೀಚೆಗೆ ಅಂದರೆ ತಾ. 26-12-1979, 5-1-1980, 12-1-1980, 19-2-1980, 22-2-1980 ಮತ್ತು 29-2-1980ರಲ್ಲಿ ಮೇಲ್ಕಂಡ ಪ್ಲಾಂಟರ್ಸ್ ಅಸೋಸಿಯೇಷನ್ ಆಫೀಸ್‌ನಲ್ಲಿ ನಿರಂತರವಾಗಿ ಸಂಘದ ಪ್ರತಿನಿಧಿಗಳಿಗೂ ಹಾಗೂ ಆಡಳಿತ ಮಂಡಳಿಗಳ ಪ್ರತಿನಿಧಿಗಳಿಗೂ ಮಧ್ಯೆ ಮಾತುಕತೆ ನಡೆಯಿತು. ಈ ತೆರನಾಗಿ ಏಳು ಸುತ್ತಿನ ಮಾತುಕತೆ ನಡೆದು ಅಂತಿಮವಾಗಿ ಕಾರ್ಮಿಕ ಸಂಘದ ಪ್ರತಿನಿಧಿಗಳ ಬೇಡಿಕೆಗಳನ್ನು ಸಂಪೂರ್ಣವಾಗಿ ಆಡಳಿತ ಮಂಡಳಿಯ ಪ್ರತಿನಿಧಿಗಳು ನಿರಾಕರಿಸಿದ ಪರಿಣಾಮವಾಗಿ ನೇರ ಸಂಧಾನ ಮುರಿದು ಬಿದ್ದಿದೆ.

ಸಂಘ ಮಂಡಿಸಿರುವ ಬೇಡಿಕೆಗಳನ್ನು ಈಡೇರಿಸಲು ಕಾಫಿ ಕ್ಯೂರಿಂಗ್ ಸಂಸ್ಥೆಗಳಿಗೆ ಆರ್ಥಿಕವಾಗಿ ಸಾಮರ್ಥ್ಯವಿದ್ದರೂ ನೇರ ಸಂಧಾನದಲ್ಲಿ ಸಂಬಳ ಹೆಚ್ಚಿಗೆ ಕೊಡಲು ಒಪ್ಪುತ್ತಿಲ್ಲ. 1978ನೇ ಇಸವಿಯಲ್ಲಿ ಆಡಳಿತ ಮಂಡಳಿಗಳು ಇದೇ ತೆರನಾದ ಕಾರ್ಮಿಕ ವಿರೋಧಿ ನೀತಿಯನ್ನು ತಳೆದಿದ್ದುದರಿಂದ ಕ್ಯೂರಿಂಗ್ ಸಂಸ್ಥೆಗಳ ಕಾರ್ಮಿಕ ನೌಕರರನ್ನು 1978ನೇ ಮಾರ್ಚ್ ತಿಂಗಳಿನಲ್ಲಿ 9 ದಿನಗಳ ಕಾಲ ಮುಷ್ಕರ ಹೂಡುವಂತೆ ಮಾಡಿ ನಾನಾ ತೆರನಾದ ಕಷ್ಟನಷ್ಟಗಳಿಗೆ ಗುರಿಪಡಿಸಿದರು. ಈಗಲೂ ಸಹ ಸಂಧಾನದಲ್ಲಿ ಕಾರ್ಮಿಕ ಪ್ರತಿನಿಧಿಗಳ ನ್ಯಾಯವಾದ ಬೇಡಿಕೆಗಳನ್ನು ತಿರಸ್ಕರಿಸುತ್ತಿರುವುದರಿಂದ ಪುನಃ ಕಾರ್ಮಿಕ ನೌಕರರನ್ನು ಮುಷ್ಕರದ ದವಡೆಗೆ ತಳ್ಳಲು ಆಡಳಿತ ಮಂಡಳಿಗಳ ಪ್ರತಿನಿಧಿಗಳು ಹವಣಿಸುತ್ತಿದ್ದಾರೆ. ಆದರೆ ಮುಷ್ಕರ ನಡೆದು ತತ್‌ಪರಿಣಾಮವಾಗಿ ಕೈಗಾರಿಕಾ ಶಾಂತಿಗೆ ಭಂಗವಾಗಬಾರದು, ಕಾರ್ಮಿಕ ನೌಕರರು ತೊಂದರೆಗೆ ಈಡಾಗಬಾರದು ಎಂಬ ಸದುದ್ದೇಶದಿಂದ ಕಾರ್ಮಿಕ ಪ್ರತಿನಿಧಿಗಳು ಎಷ್ಟೇ ಪ್ರಯತ್ನಿಸಿದರೂ ಆಡಳಿತ ಮಂಡಳಿಯವರ ಹಟಮಾರಿತನದಿಂದ ಶಾಂತಿಯುತವಾದ ಒಪ್ಪಂದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ಕಾರ್ಮಿಕ ನೌಕರರು ಅನಿವಾರ್ಯವಾಗಿ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರ ಮತ್ತಿತರೇ ಹೋರಾಟಗಳನ್ನು ನಡೆಸದೇ ಅನ್ಯಮಾರ್ಗವಿಲ್ಲವೆಂದು ಮನಗಂಡಿದೆ ಎಂದು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಆದ್ದರಿಂದ ಚಿಕ್ಕಮಗಳೂರು ನಗರದಲ್ಲಿರುವ ಕಾಫಿ ಕ್ಯೂರಿಂಗ್ ಸಂಸ್ಥೆಗಳ ಕಾರ್ಮಿಕರು ಹಾಗೂ ನೌಕರರ ವೇತನ ಹೆಚ್ಚಳಕ್ಕೆ ನಡೆಯಬಹುದಾದ ಮುಷ್ಕರಕ್ಕೆ ಸಾರ್ವಜನಿಕರೂ ಹಾಗೂ ಎಲ್ಲಾ ಕಾರ್ಮಿಕ ಸೋದರ ಸಂಘ ಸಂಸ್ಥೆಗಳು ಸಹಕಾರ, ಸಹಾಯ ಹಾಗೂ ಬೆಂಬಲ ನೀಡಬೇಕೆಂದು ಚಿಕ್ಕಮಗಳೂರಿನ ಸಾವಿಲ್ಸ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಕಾಂ ಎ. ಕೆ. ವಿಶ್ವನಾಥ್‌ರವರು ಸಂಘದ ಕಾರ್ಮಿಕರ ಪರವಾಗಿ ವಿನಂತಿಸಿರುವರು. ●

ದಲಿತರ ಗುಡಿಸಲುಗಳಿಗೆ ನೋಟೀಸು

ರಾಯಚೂರು ನಗರ ಸಭೆಯಲ್ಲಿ ಪಕ್ಷಾಂತರ ರಾಜಕೀಯದಿಂದ ಕಾಂಗ್ರೆಸ್ (ಐ)ಗೆ ಅಧಿಕಾರ ಸಿಕ್ಕಿದೆ. ದಲಿತರು, ಅಲ್ಪಸಂಖ್ಯಾತರ ಬಗ್ಗೆ ಬಹಳಷ್ಟು ಮಾತನಾಡುವ ಕಾಂಗ್ರೆಸಿನವರು ನಗರವನ್ನು ಚೊಕ್ಕಟಗೊಳಿಸುವ ಬದಲು ದಲಿತರ ಗುಡಿಸಲುಗಳನ್ನು ಕೀಳುವುದಾಗಿ ನೋಟೀಸು ಜಾರಿ ಮಾಡಿದ್ದಾರೆ. ಇದನ್ನು ಖಂಡಿಸಿ ನಗರ ಕ್ರಿಯಾ ಸಮಿತಿಯ ಸಂಚಾಲಕ ಕಾಂ. ಚಂದ್ರಶೇಖರ ಬಾಳಿಯವರು ನಾಗರೀಕರ ವಿವಿಧ ತೊಂದರೆಗಳನ್ನು ಪಟ್ಟಿಮಾಡಿ ನಗರ ಸಭಾಧ್ಯಕ್ಷರಿಗೆ ಮನವಿಯನ್ನು ನೀಡಿದ್ದಾರೆ. ಶೀಘ್ರದಲ್ಲಿಯೇ ಸಮಸ್ಯೆಗಳನ್ನು ಪರಿಹರಿಸದಿದ್ದಲ್ಲಿ ಜನತೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿರುವ ಸಂಚಾಲಕರು ಈ ದಿಶೆಯಲ್ಲಿ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಸಹಕರಿಸಬೇಕೆಂದು ಕೇಳಿಕೊಂಡಿದ್ದಾರೆ. ○

ರಾಯಚೂರು

ಕಾರ್ಯಕ್ರಮದ ಆಧಾರದಲ್ಲಿ ಒಂದಾಗಿ ಹೋರಾಡಲು ಕರೆ

ಸರ್ವಾಧಿಕಾರ ಶಕ್ತಿಯನ್ನು ಸೋಲಿಸಬೇಕಾದರೆ ಕೇವಲ ಚುನಾವಣಾ ಹೊಂದಾಣಿಕೆ ಅಥವಾ ಮೈತ್ರಿಗಳಿಂದ ಸಾಧ್ಯವಿಲ್ಲ. ಬದಲು, ದುಡಿಯುವ ಜನಕೋಟಿಗೆ ಅನುಕೂಲವಾಗುವಂತ ವಿಭಿನ್ನ ಆರ್ಥಿಕ-ಸಾಮಾಜಿಕ ಕಾರ್ಯಕ್ರಮಗಳ ಆಧಾರದಿಂದ ಒಂದಾಗಿ ಹೋರಾಟ ಮಾಡಿದರೇನೇ ಸಾಧ್ಯ ಎಂಬದಾಗಿ ರಾಯಚೂರು ನಗರದಲ್ಲಿ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು, ಹಿತೈಷಿಗಳು ಮತ್ತು ಗೆಳೆಯರನ್ನುದ್ದೇಶಿಸಿ ಕಾಂ ಎಂ. ಕೆ. ಭಟ್ ಹೇಳಿದರು. ಇದಕ್ಕೆ ನಿದರ್ಶನ ಇತ್ತೀಚಿಗಿನ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಾಧ್ಯವಾಗಿರುವುದು ಎಂದ ಎಂ. ಕೆ. ಯವರು ರಾಜ್ಯದಲ್ಲೂ ಈ ದೃಷ್ಟಿಕೋಣದಿಂದ ಮುನ್ನಡೆಯಲು ಕರೆ ಇತ್ತರು. ಕಾರ್ಮಿಕರು ಕೇವಲ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರವೇ ಹೋರಾಡದೆ, ಸಮಾಜ ಪರಿವರ್ತನೆಯ ಹೋರಾಟದ ಮಂಚೂಣಿಗೆ ಬರಲೂ ಎಂ. ಕೆ. ಯವರು ಕರೆ ಇತ್ತರು.

ಪಕ್ಷದ ಸ್ಥಳೀಯ ಘಟಕದ ಕಾರ್ಯದರ್ಶಿಯವರಾದ ಕಾಂ. ಚಂದ್ರಶೇಖರ ಬಾಳಿಯವರು ಸ್ಥಳೀಯ ಸಮಸ್ಯೆಗಳ ಬಗ್ಗೆ ವಿಶಾಲ ತಳಹದಿಯ ಒಗ್ಗಟ್ಟಿನಿಂದ ಹೋರಾಡಲು ಹಾಕಿರುವ ಕಾರ್ಯಕ್ರಮವನ್ನು ವಿವರಿಸಿ, ಎಲ್ಲರ ಸಹಕಾರವನ್ನು ಕೇಳಿದರು.

○

ರಿಕ್ಷಾ ಚಾಲಕರ ಸಂಘದ ವಾರ್ಷಿಕ ಸಭೆ

ದ.ಕ. ಜಿಲ್ಲಾ ಆಟೋ ರಿಕ್ಷಾ ಚಾಲಕರ ಸಂಘದ ವಾರ್ಷಿಕ ಮಹಾಸಭೆಯು ಮಂಗಳೂರಿನ ಬೋಳಾರದಲ್ಲಿ ಮಾರ್ಚ್ ಆರರಂದು ನಡೆಯಿತು. ಸಂಘದ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು. ಕಾಂ. ಎನ್. ಮಾಧವ ಶೆಟ್ಟಿಯವರು ಮಂಡಿಸಿದ ವರದಿಯನ್ನು ಸಭೆಯು ಚರ್ಚಿಸಿದ ನಂತರ ಅಂಗೀಕರಿಸಿತು. ಸಂಘದ ಖಜಾಂಚಿಯ ಪರವಾಗಿ ಪಿ. ಆರ್. ಅವರು ಸಂಘದ ಲೆಕ್ಕಪತ್ರವನ್ನು ಸಭೆಯ ಮುಂದೆ ಇರಿಸಿದರು.

ಸಿ.ಐ.ಟಿ.ಯು. ದ. ಕ. ಜಿಲ್ಲಾ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸಭೆ ತೀರ್ಮಾನಿಸಿತು. ಬೆಂಗಳೂರಿನ ರಿಕ್ಷಾ ಚಾಲಕರ ಸಮ್ಮೇಳನಕ್ಕೆ 3-4 ಪ್ರತಿನಿಧಿಗಳನ್ನು ಕಳಿಸಲು ತೀರ್ಮಾನಿಸಲಾಯಿತು.

ವಸತಿಹೀನ ದಲಿತರಿಗಾಗಿ ಐಕ್ಯ ಹೋರಾಟ

ರಾಯಚೂರು ನಗರದ ಅಂಬೇಡ್ಕರ್ ಬೀದಿಯಲ್ಲಿ ಹತ್ತಾರು ಸಾವಿರ ದಲಿತರು ವಾಸಿಸುತ್ತಿದ್ದಾರೆ. ಯಾವುದೇ ಸೌಕರ್ಯವಿಲ್ಲದ ಇಲ್ಲಿ ಇದ್ದ ಒಂದು ದವಾಖಾನೆಯನ್ನೂ ತೆಗೆದಿದ್ದಾರೆ ಇಡೀ ಬೀದಿಯ ಜನರಿಗಾಗಿ ಎರಡು ಕಕ್ಕಸ್ಸು, ಒಂದು ಶಾಲೆ ಮಾತ್ರ ಇದೆ ಒಂದೊಂದು ಗುಡಿಸಲುಗಳಲ್ಲಿ ಮೂರು, ನಾಲ್ಕು ಕುಟುಂಬಗಳು ವಾಸಿಸುತ್ತಿವೆ. ಸ್ಥಳದ ಅಭಾವದಿಂದಾಗಿ ಸ್ಮಶಾನ ಮತ್ತು ಶಾಲೆಯ ಆವರಣದಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳಲಾಗಿದೆ.

ದಲಿತರ ಓಟು ಪಡೆದ ಕಾಂಗ್ರೆಸ್ (ಐ) ಶಾಸಕರಾಗಲಿ, ನಗರಸಭಾ ಸದಸ್ಯರಾಗಲೀ ಮನವಿ ಅರ್ಪಿಸಿದರೂ ಜನರ ಗೋಳನ್ನು ಕೇಳಲು ಸಿದ್ಧರಿಲ್ಲದಿರುವುದರಿಂದ ಕೊನೆಗೆ ಹೋರಾಟ ಅನಿವಾರ್ಯವಾಯಿತು.

ಜಿಲ್ಲಾಧಿಕಾರಿಯವರು ತಮ್ಮ ಜಾತಿಯವರೇ ಆದ್ದರಿಂದ ಜಾಗಸಿಗಬಹುದೆಂಬ ಆಸೆಯಿಂದ ಗಾಜಗಾರ ಪೇಟೆಯ ಪಕ್ಕದಲ್ಲಿರುವ ಜಮೀನನ್ನು ತಮಗೆ ಹಂಚಬೇಕೆಂದು ದಲಿತರು ಮಾಡಿದ ಮನವಿ ವಿಫಲವಾಯಿತಲ್ಲದೆ, ಜಿಲ್ಲಾಧಿಕಾರಿಗಳು ಜಮೀನನ್ನು ರೇಷ್ಮೆ ಇಲಾಖೆಯವರಿಗೆ ಕೊಡುವುದಾಗಿ ಹೇಳಿದರು.

ದಲಿತ ಕ್ರಿಯಾ ಸಮಿತಿಯ ಹೋರಾಟಕ್ಕೆ ಬೆಂಬಲ ನೀಡಲು ನಗರ ಕ್ರಿಯಾ ಸಮಿತಿ ಮುಂದೆ ಬಂದು ತಾ॥29-2-80 ರಂದು ಅದರ ಸಂಚಾಲಕರಾದ ಕಾಂ. ಚಂದ್ರಶೇಖರ ಬಾಳಿಯವರು ಹಾಗೂ ಮತ್ತಿತರರು ಅಂಬೇಡ್ಕರ್ ಹಾಲ್‌ನಿಂದ ಹೊರಟ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿಗೆ ಹೋದಾಗ ಯಥಾಪ್ರಕಾರ ಜಿಲ್ಲಾಧಿಕಾರಿಗಳು ಇರಲಿಲ್ಲವಾದ್ದರಿಂದ, ಹಾಜರಿದ್ದ ಅಧಿಕಾರಿಗಳಿಗೆ ಮನವಿಯನ್ನು ಕೊಟ್ಟು ಐದು ದಿನಗಳ ಒಳಗಾಗಿ ಬೇಡಿಕೆಗಳನ್ನು ಈಡೇರಿಸದಿದ್ದರೆ ಜಾಗವನ್ನು ಆಕ್ರಮಿಸಲಾಗುವುದೆಂದು ತಿಳಿಸಿದರು.

ನಂತರ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ, ದಲಿತ ಕ್ರಿಯಾ ಸಮಿತಿಯ ಕಾರ್ಯದರ್ಶಿ ಜಿ. ಶಿವಣ್ಣ ರೆಡ್ಡಿ, ನಗರ ಕ್ರಿಯಾ ಸಮಿತಿಯ ಚಂದ್ರಶೇಖರ ಬಾಳಿ, ಸಿ.ಐ.ಟಿ.ಯು. ಕಾರ್ಯದರ್ಶಿ ಪುರುಶೋತ್ತಮ ಕಲಾಲಬಂಡಿ, ನಗರದ ತರುಣ ವಕೀಲ ಶಂಕರ ಮಾಲೀ ಪಾಟೀಲ್ ಹಾಗೂ ಸಮುದಾಯದ ಕರಿಯಪ್ಪನವರು ಮಾತನಾಡಿದರು. ●

ರೈತಸಂಘದ ಆಶ್ರಯದಲ್ಲಿ ಮೆರವಣಿಗೆ

ಬೆಂಗಳೂರು ಜಿಲ್ಲೆ ರೈತ ಸಂಘದ ಆಶ್ರಯದಲ್ಲಿ ಬೆಗ್ಗರ್ ಕಾಲೋನಿಗೆ ಮೆರವಣಿಗೆ ನಡೆಸಲಾಯಿತು. ಮಾರ್ಚಿ 4 ರಂದು ಬೆಗ್ಗರ್ ಕಾಲೋನಿಯವರು ದೇವಿಕಾರಾಣಿ ರೋರಿಚ್ ಅವರಿಗೆ ಬೆಂಬಲ ಕೊಟ್ಟು, ತಾತಗುಣಿ ಎಸ್ಟೇಟ್ ಹರಿಜನ ಕಾರ್ಮಿಕರನ್ನು ಹಿಡಿದುಕೊಂಡು ತಮ್ಮಲ್ಲಿಗೆ ಕರೆದುಕೊಂಡು ಹೋಗಿ ಹೆದರಿಸಿ ಅವರ ಕೈಯಲ್ಲಿರುವ ಹಣವನ್ನು ಕಿತ್ತುಕೊಂಡಿದ್ದಾರೆ. ಆದರೆ ಕಾನೂನು, ಅಧಿಕಾರಿಗಳು ವಿಚಾರಣೆ ನಡೆಸಿಲ್ಲ.

ಎಸ್ಟೇಟಿನ ಕಾರ್ಮಿಕರು ಈಗ ಮಾರ್ಚಿ ಐದರಿಂದ ವಿಧಾನಸೌಧದ ಮುಂದೆ ಧರಣಿ ಮುಷ್ಕರದಲ್ಲಿದ್ದಾರೆ. ಕಾರ್ಮಿಕರ ಹೋರಾಟಕ್ಕೆ ಅಡ್ಡಿ ತರುತ್ತಿರುವ ಬೆಗ್ಗರ್ ಕಾಲೋನಿಯವರ ಬಗ್ಗೆ ವಿಚಾರಣೆ ನಡೆಸಬೇಕೆಂದು ರೈತ ಸಂಘದ ಕಾರ್‍ಯದರ್ಶಿ ಪಿ. ಜಗನ್ನಾಥ್ ಕಾಲೋನಿಯ ಸೂಪರಿಂಟೆಂಡೆಂಟ್‌ರಿಗೆ ಮನವಿ ಮಾಡಿದ್ದರು, ಅವರು ಕ್ರಮ ತೆಗೆದುಕೊಳ್ಳುವುದಾಗಿ ಸಂಘಕ್ಕೆ ಆಶ್ವಾಸನೆ ಕೊಟ್ಟಿದ್ದಾರೆ. ನಂತರ ಪೋಲೀಸ್ ಹಾಗೂ ಸರ್ಕಾರಕ್ಕೆ ಈ ಬಗ್ಗೆ ಮನವಿ ಅರ್ಪಿಸಲಾಯಿತು. ●

ತಾತಗುಣಿ ಎಸ್ಟೇಟ್ ಬಗ್ಗೆ ಇಬ್ರಾಹಿಂ ಹೇಳಿಕೆ

ದೇವಿಕಾರಾಣಿ ರೋರಿಚ್ ಎಸ್ಟೇಟ್ ಅನ್ನು ತೋಟಗಾರಿಕೆ ಕಾಯಿದೆಗೆ ಒಳಪಡಿಸುವಂತೆ ಶಿಫಾರಸು ಮಾಡಿ ಕೇಂದ್ರ ಸರ್ಕಾರಕ್ಕೆ ಬರೆದಿರುವುದಾಗಿ ಕರ್ನಾಟಕ ರಾಜ್ಯ ಕಾರ್ಮಿಕ ಮಂತ್ರಿ ಶ್ರೀ ಸಿ. ಎಂ. ಇಬ್ರಾಹಿಂ ಅವರು ಹೇಳಿಕೆ ಕೊಟ್ಟಿದ್ದಾರೆ. ದೀರ್ಘ ಕಾಲದ ಹೋರಾಟ ನಡೆಸುತ್ತಲಿರುವ ಎಸ್ಟೇಟಿನ ಕಾರ್ಮಿಕರ ಬೇಡಿಕೆಗಳಲ್ಲಿ ಇದು ಒಂದು ಪ್ರಮುಖ ಬೇಡಿಕೆಯಾಗಿದೆ. ●

ಆರ್ಥಿಕ ಸಮೀಕ್ಷೆ:

ಇಂದಿರಾ ಅಧಿಕಾರಕ್ಕೆ ಬಂದರೂ ಬೆಲೆಗಳು ಇಳಿಯಲಿಲ್ಲ!

ಆರ್. ಚಂದ್ರ

ಕೇಂದ್ರದಲ್ಲಿ ಇಂದಿರಾಗಾಂಧಿ ಸರಕಾರ ಅಧಿಕಾರಕ್ಕೆ ಬಂದು ಆರು ವಾರಗಳು ಉರುಳಿದವು. ಆದರೆ, ಜೀವನಾವಶ್ಯಕ ವಸ್ತುಗಳ ಬೆಲೆಗಳು ಇಳಿಮುಖವಾಗದೆ ನಾಗಾಲೋಟದಿಂದ ಏರುತ್ತಲೇ ಇವೆ! 'ಇಂದಿರಾ ಕರೆಸಿರಿ ದೇಶ ಉಳಿಸಿರಿ', 'ಇಂದಿರಾ ಕರೆಸಿರಿ ಬೆಲೆ ಇಳಿಸಿರಿ', ಇವು ಕಳೆದ ಲೋಕಸಭಾ ಚುನಾವಣೆಯ ಭಾರೀ ಘೋಷಣೆಗಳು. ಸ್ಥಿರಸರಕಾರ ನೀಡುವುದಾಗಿಯೂ ಬೆಲೆ ನಿಯಂತ್ರಿಸುವುದಾಗಿಯೂ ಚುನಾವಣಾ ಪ್ರಚಾರದಲ್ಲಿ ಇಂದಿರಾ ಕಾಂಗ್ರೆಸ್ ಜನರಿಗೆ ಆಶ್ವಾಸನೆಗಳನ್ನಿಗಳತ್ತು ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಬಂದಿರುವುದಾದರೂ, ಜನತಾ, ಲೋಕದಳ ಸರಕಾರಗಳ ಆಡಳಿತದಲ್ಲಿದ್ದಂತೆಯೇ ರಾಜಕೀಯ ಅಸ್ಥಿರತೆ, ಆರ್ಥಿಕ ದುಃಸ್ಥಿತಿ, ಬೆಲೆಏರಿಕೆ, ಇತ್ಯಾದಿ ಸಮಸ್ಯೆಗಳು ಹಿಂದೆಂದೂ ಇಲ್ಲದಷ್ಟು ಹೆಚ್ಚುತ್ತಿವೆ.

ಇಂದಿರಾಗಾಂಧಿ ಚುನಾವಣೆಯಲ್ಲಿ ಜಯಭೇರಿ ಬಾರಿಸಿದಾಗ ಹೆಚ್ಚಿನ ಗುತ್ತೇದಾರಿ ಬಂಡವಾಳಶಾಹಿಗಳಿಂದ ನಿಯಂತ್ರಿತವಾದ ಪತ್ರಿಕೆಗಳು ಬೆಲೆಗಳು ಇಳಿಯುತ್ತಿವೆ ಎಂದು ವರದಿ ಮಾಡಲಾರಂಭಿಸಿದವು. ಇಂದಿರಾಗಾಂಧಿ ಅಧಿಕಾರಕ್ಕೆ ಬಂದರೆ ವ್ಯಾಪಾರಿಗಳು, ಅಕ್ರಮ ಸಂಗ್ರಹಕಾರರು, ಕಳ್ಳಸಂತೆ ಕದೀಮರು ಹೆದರುತ್ತಾರೆ ಎಂದು ಪ್ರಚಾರ ಪ್ರಾರಂಭವಾಯಿತು. ಆದರೆ, ಅವರ ವ್ಯವಹಾರಗಳು ಮುಂಚಿನಂತೆಯೇ, ಇನ್ನೂ ಬಿರುಸಾಗಿಯೇ ನಡೆಯುತ್ತಿದೆ. ಬೆಲೆಗಳು ಇಳಿಮುಖವಾಗುವ ಬದಲು ಏರುತ್ತಲೇ ಇರುವುದನ್ನು ಈ ಕೆಳಗಿನ ಸರಕಾರದ ಅಧಿಕೃತ ಬೆಲೆಸೂಚಿ ಪ್ರಕಟಣೆಯಿಂದ ತಿಳಿಯಬಹುದು.

'70-71ರ ಸಗಟು ವ್ಯಾಪಾರದ ಬೆಲೆಸೂಚಿ	: 100.0
'79 ಡಿಸೆಂಬರ್ ಅಂತ್ಯದಲ್ಲಿ	: 224.1
'80 ಜನವರಿ 5 ರಂದು	: 223.2
'80 ಜನವರಿ 12 ರಂದು	: 224.2
'80 ಜನವರಿ 19 ರಂದು	: 223.8
'80 ಜನವರಿ 26ರಂದು	: 224.8
'80 ಫೆಬ್ರುವರಿ 9 ರಂದು	: 226 7

1980 ಜನವರಿ 5 ರಿಂದ ಫೆಬ್ರುವರಿ 9ರವರೆಗೆ ಸಗಟು ವ್ಯಾಪಾರದ ಬೆಲೆಸೂಚಿಯು 223.2ರಿಂದ 226.7ಕ್ಕೇರಿತು. ಅಂದರೆ, ಒಂದೇ ತಿಂಗಳಲ್ಲಿ ಶೇ. 1.75ರಷ್ಟು ಬೆಲೆಏರಿಕೆಯಂತಾಯಿತು. ವರ್ಷಕ್ಕೆ ಶೇ. 21ರಷ್ಟು ಬೆಲೆ ಏರಿಕೆಯಂತಾಯಿತು. ಚಿಲ್ಲರೆ ಮಾರುಕಟ್ಟೆಗಳಲ್ಲಿ ಆಹಾರಧಾನ್ಯಗಳಿಗಿಂತಲೂ, ಸಕ್ಕರೆ, ಬೆಲ್ಲ, ಸೀಮೆಎಣ್ಣೆ, ಸಾಬೂನ್, ಅಡಿಗೆತೈಲ, ಕಾಫಿ, ಚಹ, ಆಹಾರ ಪಾನೀಯಗಳು, ಮಕ್ಕಳ ಪೌಷ್ಟಿಕ ಆಹಾರ ವಸ್ತುಗಳು, ಪಾಠಿ ಪುಸ್ತಕಗಳು, ಸಿಗರೇಟು, ಬಲ್ಬ್, ಇತ್ಯಾದಿ ದಿನಬಳಕೆಯ ವಸ್ತುಗಳ ಬೆಲೆಗಳು ವಿಪರೀತ ಏರುತ್ತಿವೆ. ಕಳೆದ ಆರು ವಾರಗಳಲ್ಲಿ ಸಕ್ಕರೆ ಬೆಲೆ ಕಿ. ಜಿ. ಗೆ ರೂ.4-15 ರಿಂದ ರೂ. 7-8ಕ್ಕೇರಿದೆ. ನೆಲಗಡಲೆ ಎಣ್ಣೆಯ ಬೆಲೆ ಕಿ. ಜಿ. ಗೆ ರೂ. 8-50 ರಿಂದ ರೂ. 9-65ಕ್ಕೇರಿದೆ. ಸೀಮೆಎಣ್ಣೆಯ ಅಧಿಕೃತ ಬೆಲೆ ಲೀಟರಿಗೆ ರೂ. 1-55 ಆದರೂ, ರೂ 2ಕ್ಕಿಂತ ಕಡಿಮೆಗೆ ಸಿಗುವುದೇ ಇಲ್ಲ. ಡೀಸೇಲ್, ಸೀಮೆಎಣ್ಣೆ, ಸಿಮೆಂಟ್, ಒಳ್ಳೆ ತರಗತಿಯ ಕಾಗದ, ಸಿಗರೇಟು, ಮುಂತಾದ ಕೆಲವು ಜೀವನಾವಶ್ಯಕ ವಸ್ತುಗಳು ಮಾರುಕಟ್ಟೆಯಿಂದ ಕಣ್ಮರೆಯಾಗುತ್ತಿವೆ. ಜನಜೀವನ ಸಹಿಸಲಾರದಷ್ಟು ಕಷ್ಟವಾಗುತ್ತಿದೆ. ಜನರಲ್ಲಿ ಇಂದು ಹಾಹಾಕಾರ ಎದ್ದಿದೆ. ನಿರುಪಾಯರಾಗಿ ಅವರು ಹಣದುಬ್ಬರದ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದಾರೆ.

ಇಂದಿರಾಗಾಂಧಿ ಸರಕಾರಕ್ಕೆ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಇನ್ನೂ ಬಿಡುವಾಗಲಿಲ್ಲ! ಅದು ತನ್ನ ರಾಜಕೀಯ ಅಧಿಕಾರವನ್ನು ಭದ್ರಗೊಳಿಸುವುದರಲ್ಲಿ ನಿರತವಾಗಿದೆ!

ಕೈಗಾರಿಕೆ, ಪೆಟ್ರೋಲಿಯಂ ಮತ್ತು ರಾಸಾಯನಿಕ, ಉಕ್ಕು ಮತ್ತು ಗನಿ ಕಾರ್ಮಿಕ, ಸಾರ್ವಜನಿಕ ಸರಬರಾಜು, ಮುಂತಾದ ಆರ್ಥಿಕ ವಿಷಯಗಳಿಗೆ ಕೇಂದ್ರದಲ್ಲಿ ಇನ್ನೂ ಖಾಯಂ ಮಂತ್ರಿಗಳನ್ನು ನೇಮಕ ಮಾಡಲಿಲ್ಲ. ಯೋಜನಾ ಆಯೋಗದ ಉಪಾಧ್ಯಕ್ಷರೂ ಸದಸ್ಯರೂ ರಾಜೀನಾಮೆ ಇತ್ತ ಮೇಲೆ, ಆಯೋಗವನ್ನು ಇನ್ನೂ ಪುನರ್‌ರಚಿಸಲಿಲ್ಲ. ಆರನೇ ಯೋಜನೆಯು ಬರೆದ ಕಾಗದದಲ್ಲಿಯೇ ಉಳಿದಿದೆ. ಅದರ ಕುರಿತು ಕೇಂದ್ರ-ರಾಜ್ಯಗಳೊಡನೆ ಅಂತಿಮ ಹಂತದ ಚರ್ಚೆಯನ್ನು ಹೊಸ ಸರಕಾರವು ಹಠಾತ್ತನೆ ನಿಲ್ಲಿಸಿತು. ಕೆಲವು ರಾಷ್ಟ್ರೀಕೃತ ಬ್ಯಾಂಕುಗಳ, ಸಾರ್ವಜನಿಕ ಕೈಗಾರಿಕಾ ಸಂಸ್ಥೆಗಳ ಉಚ್ಚ ಅಧಿಕಾರಿಗಳ ಸ್ಥಾನಗಳು ಖಾಲಿಬಿದ್ದಿವೆ. ಭೂಮಾಲಕರು, ವ್ಯಾಪಾರಿಗಳು, ಗುತ್ತೇದಾರಿ ಬಂಡವಾಳಶಾಹಿಗಳು, ಬಹುರಾಷ್ಟ್ರೀಯ ಸಂಸ್ಥೆಗಳು ಸರಕಾರದ ಮೇಲೆ ಈಗಾಗಲೇ ತಮ್ಮ ಪ್ರಭಾವ ಬೀರುತ್ತಿದ್ದು, ಅವರ ಲಾಭಾದಾಯಗಳಿಗನುಗುಣವಾಗಿ ಸರಕಾರದ ಆರ್ಥಿಕ ನೀತಿ, ತೆರಿಗೆ ನೀತಿ, ಕಾರ್ಮಿಕ ನೀತಿಗಳನ್ನು ರೂಪಿಸಲು ಭಾರೀ ಒತ್ತಾಯಗಳು ನಡೆಯುತ್ತಿವೆ. ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳ ಮೇಲಿನ ನಿಯಂತ್ರಣವನ್ನು ಸಡಿಲಿಸಲು, ಅವುಗಳ ಉಚ್ಚ ಅಧಿಕಾರಿಗಳ ಸಂಬಳ ಸವಲತ್ತುಗಳನ್ನೂ ಲಾಭಾಂಶವನ್ನೂ ಪುನಃ ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಿವೆ. ಸರಕಾರಿ ಆರ್ಥಿಕ ತಜ್ಞರು 'ಆರ್ಥಿಕ ತುರ್ತುಪರಿಸ್ಥಿತಿ'ಯನ್ನು ಜಾರಿಗೊಳಿಸಿ ಕಾರ್ಮಿಕರ ಮತ್ತು ನೌಕರರ ಕೂಲಿ ಸಂಬಳಕ್ಕೆ ಬೋನಸ್‌ಗೆ ಮುಟ್ಟುಗೋಲು ಹಾಕುವಂತೆ ಸಲಹೆ ಮಾಡುತ್ತಿದ್ದಾರೆ. ಕೇಂದ್ರದ ಮುಂಗಡಪತ್ರವನ್ನು ಸಂಸತ್ತಿನಲ್ಲಿಡುವುದನ್ನು ಮುಂದೂಡಲಾಗಿದೆ.

ಸರಕಾರಿ ಅಧಿಕಾರಿ ವರ್ಗ ಮೇಲಿನಿಂದ ಕೆಳಗಿನವರೆಗೆ ಮುಂಚಿನಂತೆಯೇ ನಿರುತ್ಸಾಹ ನಿಷ್ಕ್ರಿಯತೆಯನ್ನು ತೋರಿಸುತ್ತಿದೆ, ತನ್ನ ಸ್ಥಾನ ಇನ್ನಷ್ಟು ಭದ್ರಪಡಿಸುತ್ತಿದೆ. ಸರಕಾರದಲ್ಲಿರುವ ರಾಜಕೀಯ ಪುಢಾರಿಗಳೂ, ಅಧಿಕಾರಿವರ್ಗದವರೂ ಆರ್ಥಿಕ ಸಮಸ್ಯೆಗಳ ಕುರಿತು ನಿಷ್ಕ್ರಿಯರಾಗುತ್ತಿರುವಾಗ, ಆರ್ಥಿಕ ದುಃಸ್ಥಿತಿ, ಬೆಲೆಏರಿಕೆ, ನಿರುದ್ಯೋಗ, ಮುಂತಾದ ಸಮಸ್ಯೆಗಳು ಇನ್ನಷ್ಟು ಹದಗೆಡುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಸರಕಾರದ ಅನಿಶ್ಚಿತ ಧೋರಣೆಯಿಂದಾಗಿ ಅಕ್ಟೋಬರ್ 79ರಿಂದ ಕೇವಲ 75 ದಿನಗಳೊಳಗಾಗಿ ಸಕ್ಕರೆ ವ್ಯಾಪಾರ ಒಂದರಲ್ಲೇ ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು, ದಳ್ಳಾಳಿಗಳು, ಕಳ್ಳಸಂತೆ ಕದೀಮರು, ಅಕ್ರಮ ಸಂಗ್ರಹಗಾರರು ಸುಮಾರು ರೂ. 200 ಕೋಟಿಯಷ್ಟು ಅಕ್ರಮ ಲಾಭಗಿಟ್ಟಿಸಿದ್ದಾರೆಂದು ಪತ್ರಿಕೆಗಳ ಮೂಲದಿಂದ ತಿಳಿದುಬಂದಿದೆ. ಕಳೆದ ಒಂದು ವರ್ಷದಲ್ಲಿ ಸರಕಾರದ ಸಕ್ಕರೆಯ ಧೋರಣೆಯಲ್ಲಿ 5-6 ಸಲ ಬದಲಾವಣೆಗಳಾದವು. ಸಕ್ಕರೆ ಸರಬರಾಜು ಮುಕ್ತ ಮಾರುಕಟ್ಟೆಯಿಂದ ಪುನಃ ಅವಳಿ ಮಾರುಕಟ್ಟೆಗಳಿಗೆ ಬದಲಾವಣೆಯಾಗುವಷ್ಟರಲ್ಲಿ ಸಕ್ಕರೆಯ ಬೆಲೆಯು ಒಂದಕ್ಕೆ ರಡರಷ್ಟಾಯಿತು. ಗ್ರಾಹಕರು ಕೃತಕ ಕೊರತೆಯಿಂದಾಗಿ ಬೆಲೆಏರಿಕೆಯಿಂದಾಗಿ ಪಡಬಾರದ ಕಷ್ಟಗಳಿಗೆ ತುತ್ತಾದರು. ಸರಕಾರದ ಸಾರ್ವಜನಿಕ ವಿತರಣೆಯ ವ್ಯವಸ್ಥೆ ನಿಷ್ಕ್ರಿಯವಾಗಿದೆ. ಅದಕ್ಕೆ ಸರಕಾರದ ಏಜನ್ಸಿಗಳ ಮೂಲಕ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಕ್ಕರೆ ಸರಬರಾಜು ಆಗುತ್ತಿಲ್ಲ. ಸಕ್ಕರೆ ಕಾರ್ಖಾನೆಗಳು ಲೆವಿ ಸಕ್ಕರೆಯನ್ನು ಸರಕಾರದ ಏಜನ್ಸಿಗಳಿಗೆ ಬಿಡುಗಡೆಮಾಡಲು ತಕರಾರು ಮಾಡುತ್ತಿದ್ದಾರೆ, ಹೈಕೋರ್ಟುಗಳಲ್ಲಿ ದಾವೆಹೂಡುತ್ತಿದ್ದಾರೆ. ಸಕ್ಕರೆ ಸಾರ್ವಜನಿಕ ವಿತರಣಾ ಚಿಲ್ಲರೆ ಅಂಗಡಿಗಳಲ್ಲಿ ಸಿಗದಿರುವಾಗ ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಅದರ ಬೆಲೆಏರುತ್ತಿರುವಾಗ ಬಡ ಗ್ರಾಹಕರು ಯಾವ ಕೋರ್ಟ್‌ಗೆ ಮೊರೆಹೋಗಬೇಕು? ಸಕ್ಕರೆ ಉತ್ಪಾದನೆ, ವಿತರಣೆಗಳನ್ನು ರಾಷ್ಟ್ರೀಕರಿಸಬೇಕೆಂಬ, ಸಕ್ಕರೆ ದಾಸ್ತಾನು ಸರಕಾರ ಸಾಕಷ್ಟು ಇರಿಸಿ ಬೆಲೆ ನಿಯಂತ್ರಿಸಬೇಕೆಂಬ ಜನಪ್ರಿಯ ಬೇಡಿಕೆಗಳನ್ನು ಇಂದಿರಾ ಸರಕಾರ ತಿರಸ್ಕರಿಸಿದೆ.

ಸರಕಾರದ ತಿಳಿಗೇಡಿತನದಿಂದ ಮತ್ತು ನಿಷ್ಕ್ರಿಯತೆಯಿಂದ ಕಳೆದ ಕೆಲವು ವಾರಗಳಲ್ಲಿ ಚಿನ್ನ ಬೆಳ್ಳಿಗಳ ಬೆಲೆಗಳು ಆಂತರಿಕ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವಿಪರೀತ ಏರುತ್ತಿರುವಾಗ, ಕಳ್ಳಸಾಗಾಣೆಗಾರರು ಸುಮಾರು 400 ಟನ್ ಬೆಳ್ಳಿಯನ್ನು ಭಾರತದಿಂದ ವಿದೇಶಗಳಿಗೆ ಕಳ್ಳಸಾಗಾಣಿಕೆ ಮಾಡಿ ರೂ. 120 ಕೋಟಿ ಲಾಭ ಗಿಟ್ಟಿಸಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಲದೆ, ಜನತಾ ಸರಕಾರವು ಚಿನ್ನ ಹರಾಜುಮಾಡಿದ್ದನ್ನು ಕೆಲವೇ ದೊಡ್ಡ ವ್ಯಾಪಾರಿಗಳೂ ಗುತ್ತೇದಾರಿ ಕೈಗಾರಿಕೋದ್ಯಮಿಗಳೂ ಕಬಳಿಸಿಕೊಂಡು ಮುಂದೆ ಚಿನ್ನದ ಬೆಲೆಏರಿಕೆಯಿಂದಾಗಿ ನೂರಾರು ಕೋಟಿ ರೂಪಾಯಿ ಲಾಭಗಿಟ್ಟಿಸಿದ್ದಾರೆಂದು ತಿಳಿದುಬಂದಿದೆ. ಕಾಂ. ನಿರೇನ್ ಘೋಷ್ ಲೋಕಸಭೆಯಲ್ಲಿ ಮೊನ್ನೆ ಮಾತನಾಡುತ್ತ ಪ್ರತೀ ವರ್ಷ ತೆರಿಗೆ ತಪ್ಪಿಸುವುದರಿಂದ ರೂ. 3000 ದಿಂದ ರೂ.4000 ಕೋಟಿಯಷ್ಟು ಕಪ್ಪುಹಣ ವ್ಯಾಪಾರಿಗಳ, ಬಂಡವಾಳಶಾಹಿಗಳ, ರಾಜಕೀಯ ಪುಢಾರಿಗಳ ಮತ್ತು ಅಧಿಕಾರಿಗಳ ಕೈಸೇರುವುದೆಂದು ತಿಳಿಸಿದ್ದಾರೆ. ದೇಶದಲ್ಲಿ ಇಂದು ರೂ. 30000 ಕೋಟಿಯಷ್ಟು ಕಪ್ಪುಹಣದ ಚಲಾವಣೆ ಇದ್ದು ಅಕ್ರಮ ಸಂಗ್ರಹ, ಬೆಲೆಏರಿಕೆ, ಭ್ರಷ್ಟಾಚಾರಗಳಿಗೆ ಪ್ರಬಲ ಕಾರಣವಾಗಿದೆ ಎಂದು ತಿಳಿಸಿದ್ದಾರೆ. ಕಪ್ಪುಹಣವು ದೇಶದಲ್ಲಿ ಬಂದು ಸಮನಾಂತರ ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸಿ ಸರಕಾರದ, ರಿಸರ್ವ್ ಬ್ಯಾಂಕಿನ, ಯಾವ ನಿಯಂತ್ರಣವೂ ಫಲಕಾರಿಯಾಗುತ್ತಿಲ್ಲ.

ಇಂದಿರಾಗಾಂಧಿಯ ಹೊಸ ಸರಕಾರ ಕಳ್ಳಸಂತೆ ಕದೀಮರನ್ನು, ಕಳ್ಳಸಾಗಾಣಿಕೆಗಾರರನ್ನು, ಅಕ್ರಮ ಸಂಗ್ರಹಗಾರರನ್ನು ಮುಂಜಾಗ್ರತೆಯಾಗಿ ವಿಚಾರಣೆ ಇಲ್ಲದೆ ಬಂಧಿಸಬೇಕೆಂದು ಹೊಸ ಕಾನೂನು ಜಾರಿಗೊಳಿಸಿದೆ. ಮುಂಜಾಗ್ರತಾ ಬಂಧನವು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆಯೆಂದೂ ರಾಜಕೀಯ ಪ್ರತೀಕಾರ ಕೈಕೊಳ್ಳುವ ದುರುದ್ದೇಶ ಉಳ್ಳದ್ದಾಗಿದೆ ಎಂದೂ ಅದನ್ನು ಅನುಷ್ಠಾನಕ್ಕೆ ತರುವುದಿಲ್ಲ ಎಂದೂ ಪ. ಬಂಗಾಳ, ಕೇರಳ, ತ್ರಿಪುರಾ ರಾಜ್ಯಗಳ ಎಡರಂಗ ಸರಕಾರಗಳು ನಿಶ್ಚಯಿಸಿದಾಗ, ಈ ಸರಕಾರಗಳ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳುವುದಾಗಿ ಇಂದಿರಾ ಸರಕಾರ ಬೆದರಿಕೆ ಹಾಕುತ್ತಿದೆ. ಆದರೆ, ಇಂತಹ ಸಾಮಾಜಿಕ ಅಪರಾಧಿಗಳನ್ನು ಶಿಕ್ಷಿಸಲು ಈಗಾಗಲೇ ಹಲವಾರು ಕಾನೂನುಗಳಿದ್ದರೂ ಇಂದಿರಾಗಾಂಧಿಯ ಮೊದಲಿನ ಅಥವಾ ಈಗಿನ ಸರಕಾರದ ಅವಧಿಯಲ್ಲಾಗಲೀ, ಹಿಂದಿನ ಜನತಾ, ಲೋಕದಳ ಸರಕಾರಗಳ ಅವಧಿಯಲ್ಲಾಗಲೀ ಅವರಿಗೆ ಜೈಲು ಜುಲ್ಮಾನೆಗಳಾಗಿರುವುದು ಯಾರಿಗೂ ತಿಳಿದಿಲ್ಲ. ಕರ್ನಾಟಕದಲ್ಲಿ ಮುಖ್ಯಮಂತ್ರಿ ಗುಂಡೂರಾವ್ ಇಂತಹ ಸಾಮಾಜಿಕ ಅಪರಾಧಿಗಳ ಭಾವಚಿತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದಾಗಿ ಬೆದರಿಸಿದ್ದಾರೆ. ಆದರೆ, ಮೊನ್ನೆ ವಿಧಾನಸಭೆಯ ಚರ್ಚೆಯಲ್ಲಿ ಸದಸ್ಯರೊಬ್ಬರು ಟೀಕಿಸಿದಂತೆ, ಇದುತನಕ ಮುಖ್ಯಮಂತ್ರಿಗಳ ಮತ್ತವರ ಸಹೋದ್ಯೋಗಿಗಳು ತುಲಾಭಾರ ಮಾಡಿಸಿಕೊಳ್ಳುವ, ಸಂತೋಷ ಸನ್ಮಾನ ಸಮಾರಂಭಗಳಲ್ಲಿ ಭಾಗವಹಿಸುವ, ಮಠ ದೇವಸ್ಥಾನಗಳಿಗೆ ಸಂದರ್ಶಿಸುವ ಭಾವಚಿತ್ರಗಳಷ್ಟೇ ಪತ್ರಿಕೆಗಳಲ್ಲಿ ಬರುತ್ತಿವೆ! ಬೆಲೆನಿಯಂತ್ರಣದ ಪ್ರಶ್ನೆಬಂದಾಗ ಮುಖ್ಯಮಂತ್ರಿಯವರು ಕೇಂದ್ರ ಸರಕಾರದತ್ತ ಕೈತೋರಿಸುತ್ತಾರೆ.

ಈಗ ಇಂದಿರಾಗಾಂಧಿ ಬೇರೆ ಧಾಟಿಯಲ್ಲಿ ಮಾತನಾಡತೊಡಗಿದ್ದಾರೆ. ಸಧ್ಯದ ಆರ್ಥಿಕ ದುಃಸ್ಥಿತಿ, ಬೆಲೆಏರಿಕೆ, ಇತ್ಯಾದಿಗಳಿಗೆ ಜನತಾ ಲೋಕದಳ ಸರಕಾರಗಳೇ ಕಾರಣ. ಈ ಸಮಸ್ಯೆಗಳನ್ನು ಬಗೆಹರಿಸಲು ತನ್ನೊಡನೆ ಇಂದ್ರಜಾಲ ವಿದ್ಯೆ ಇಲ್ಲ, ಇವುಗಳು ಸಾವಧಾನವಾಗಿ ಪರಿಹಾರವಾಗಬೇಕು. ಅಂತರಾಷ್ಟ್ರೀಯ ಬಿಕ್ಕಟ್ಟಿನಿಂದಾಗಿ ಆರ್ಥಿಕ ದುಃಸ್ಥಿತಿ ಹೆಚ್ಚೀತು, ಎಂದೆಲ್ಲಾ ಹೇಳತೊಡಗಿದ್ದಾರೆ! ಅಂದರೆ, ದುಡಿಯುವ ಜನರು ಬಡತನ, ನಿರುದ್ಯೋಗ, ಬೆಲೆಏರಿಕೆಗಳನ್ನು ಇನ್ನಷ್ಟು ಕಾಲ ಸಹಿಸಿಕೊಳ್ಳಬೇಕು ತಾನು ಅಧಿಕಾರದಲ್ಲಿ ಮುಂದುವರಿಯಲು ಸಹಕರಿಸಬೇಕು ಎಂದು!

ಬೆಲೆಗಳು ಏರುವುದಾಗಲೀ ಇಳಿಯುವುದಾಗಲೀ ಇಂದಿರಾಗಾಂಧಿಯಂತಹ ವ್ಯಕ್ತಿಗಳನ್ನು ಹೊಂದಿಕೊಂಡಿಲ್ಲ. ಬಂಡವಾಳಶಾಹಿ ಪದ್ಧತಿಯ ಆರ್ಥಿಕ ವ್ಯವಸ್ಥೆ ಇರುವ ಎಲ್ಲಾ ಸಮಾಜಗಳಲ್ಲಿಯೂ ಬೆಲೆಏರಿಕೆಯ ಸಮಸ್ಯೆಯು ಭೂತಾಕಾರವಾಗಿ ಬೆಳೆಯುತ್ತಿದೆ. ಹಾಗೆಯೇ ನಿರುದ್ಯೋಗ ಬಡತನದ ಸಮಸ್ಯೆಗಳೂ ಪರಿಹಾರವಾಗದೇ ಉಳಿದಿವೆ. ಇಂದಿರಾಗಾಂಧಿ ಸರಕಾರವಿರುವಾಗಲೂ ಸಗಟುವ್ಯಾಪಾರದ ಬೆಲೆಸೂಚಿ(1970-71 = 100) ಯು 1971ರಲ್ಲಿ 105 ಇದ್ದುದು

(7ನೇ ಪುಟ ನೋಡಿ)

ಉಪಖಂಡದಲ್ಲಿ ಸಾಮ್ರಾಜ್ಯಶಾಹಿ ಯುದ್ಧದ ಭೀತಿ

ಇತ್ತೀಚೆಗೆ ನಡೆದ ಭಾರತ-ಪಾಕಿಸ್ತಾನ ಮಾತುಕತೆಗಳು ನಮ್ಮ ದೇಶಕ್ಕೆ ಒದಗಬಹುದಾದ ಅಪಾಯದ ಸೂಚನೆಗಳು ಕಂಡುಬಂದಿವೆ. ಆದರೆ ಅವುಗಳನ್ನು ಬಚ್ಚಿಡಲು ಸರಕಾರೀ ಮಾಧ್ಯಮಗಳು ಮತ್ತು ಭಾರತೀಯ ಪತ್ರಿಕೆಗಳು ಪ್ರಯತ್ನಿಸಿದ್ದುವು. ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಜನರ ಧಾರ್ಮಿಕ ಹಾಗೂ ಜಾತೀಯ ಭಾವನೆಗಳನ್ನು ಕೆರಳಿಸದಿರುವುದು ನ್ಯಾಯವಾದರೂ, ಭಾರತ ಮತ್ತು ಪಾಕಿಸ್ತಾನಗಳ ಜನರ ವಿರುದ್ಧ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಪಿತೂರಿ ಮತ್ತು ಜನರ ಮೇಲೆ ತಮ್ಮ ಹಿಡಿತವನ್ನು ಉಳಿಸಿಕೊಳ್ಳುವ ಸಲುವಾಗಿ ದೇಶದ ಸ್ವಾತಂತ್ರ್ಯವನ್ನು ಬಲಿಗೊಡುವ ಸರ್ವಾಧಿಕಾರಿಗಳ ಪ್ರಯತ್ನಗಳನ್ನು ಬಯಲುಗೊಳಿಸದಿರುವುದು ಒಂದು ದೊಡ್ಡ ಅಪರಾಧ.

ಉಭಯ ದೇಶಗಳ ದೃಷ್ಟಿಕೋನಗಗಳಲ್ಲಿ ಯಾವ ಹೊಂದಾಣಿಕೆಯಿಲ್ಲದಿದ್ದರೂ ಈ ಮಾತುಕತೆಗಳಿಂದ ಏನನ್ನೋ ಸಾಧಿಸಲಾಗಿದೆಯೆಂದೂ, ಪರಸ್ಪರ ಮೈತ್ರಿ ಹೆಚ್ಚಿದೆಯೆಂದೂ ಹೇಳಲಾಗಿದೆ. ಆದರೆ, ವಸ್ತುಸ್ಥಿತಿ ಏನೆಂದರೆ ಮಾತುಕತೆಗಳು ವಿಫಲಗೊಂಡು, ಉಭಯ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಸಾಮ್ರಾಜ್ಯಶಾಹಿ ಹಸ್ತಕ್ಷೇಪದ ಅಪಾಯವುಂಟಾಗಿದೆ,

ಈ ಮಾತುಕತೆಗಳು ಕೇವಲ ಔಪಚಾರಿಕವೆಂಬುದು ಮೊದಲೇ ತಿಳಿದಿತ್ತು. ಯಾಕೆಂದರೆ ಭಾರತದ ನಿಯೋಗವು ಪಾಕಿಸ್ತಾನಕ್ಕೆ ಹೋಗುವ ಮೊದಲೇ, ಅಧ್ಯಕ್ಷ ಕಾರ್ಟರರ ಭದ್ರತಾ ಸಲಹೆಗಾರ ಬಿಗ್ನೂ ಬ್ರೆಜಿನ್‌ಸ್ಕಿಯವರು ಜನರಲ್ ಜಿಯಾರನ್ನು ಭೇಟಿಯಾಗಿ ಭಾರೀ ಪ್ರಮಾಣದ ಮಿಲಿಟರಿ ಶಸ್ತ್ರಾಸ್ತ್ರಗಳ ನೆರವನ್ನು ನೀಡುವ ಆಶ್ವಾಸನೆಯಿತ್ತಿದ್ದರು. ಆರಂಭದಲ್ಲಿ 400 ಮಿಲಿಯ ಡಾಲರುಗಳಷ್ಟಿದ್ದ ಈ ನೆರವನ್ನು "ಕಳಪೆ"ಯೆಂದು ತಿರಸ್ಕರಿಸಿದ್ದ ಜಿಯಾ, ಸಾಮ್ರಾಜ್ಯಶಾಹಿಗಳು ತನ್ನ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸಬಯಸುವುದನ್ನು ಕಂಡು, ಬೇಡಿಕೆಯನ್ನು 4 ಬಿಲಿಯ ಡಾಲರುಗಳಿಗೆ ಏರಿಸಿದರು. ಈ ಬೇಡಿಕೆಯನ್ನು ಪರಿಶೀಲಿಸುವುದಾಗಿಯೂ, ತಾವು ನೀಡಲಿರುವ ಸಹಾಯ ಇತರ ಪಾಶ್ಚಾತ್ಯ ರಾಷ್ಟ್ರಗಳ ಸಹಾಯದ ಮೇಲೆ ಹೊಂದಿದೆಯೆಂದೂ ಅಮೆರಿಕದ ರಾಜ್ಯಾಂಗ ಉಪಕಾರ್ಯದರ್ಶಿ ಹೇಳಿದರು. ಭಾರತೀಯ ನಿಯೋಗವು ಪಾಕಿಸ್ತಾನಕ್ಕೆ ಹೊರಡುವ ಮುನ್ನವೇ, ಪಾಶ್ಚಾತ್ಯ ರಾಷ್ಟ್ರಗಳು ಮತ್ತು ಸೌದಿ ಅರೇಬಿಯಾ ಪಾಕಿಸ್ತಾನವನ್ನು ಸಾಮ್ರಾಜ್ಯಶಾಹಿಗಳ ಆಯುಧಾಗಾರ (arsenal)ವಾಗಿ ಪರಿವರ್ತಿಸಲು ನಿರ್ಧರಿಸಿದ್ದುವು.

ಇರಾನಿನಲ್ಲಿ ಸೋಲನ್ನು ಅನುಭವಿಸಿದ ಬಳಿಕ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಈ ವಲಯದಲ್ಲಿ ಒಂದು ಭದ್ರ ನೆಲೆಗಾಗಿ ಶೋಧ ನಡೆಸಿದ್ದರು. ಅವರ ನೆರವನ್ನು ಸ್ವೀಕರಿಸುವ ಮೂಲಕ ಜನರಲ್ ಜಿಯಾರು ಪಾಕಿಸ್ತಾನವನ್ನು ಅವರ ನೆಲೆಯನ್ನಾಗಿ ಪರಿವರ್ತಿಸಿದ್ದಾರೆ.

ಕೆಲವು ತಿಂಗಳುಗಳ ಹಿಂದೆಯಷ್ಟೇ, ಅಣ್ವಸ್ತ್ರಗಳನ್ನು ತಯಾರಿಸುವ ಪಾಕಿಸ್ತಾನದ ಯೋಜನೆಯನ್ನು ಅಮೆರಿಕನ್ ಸಾಮ್ರಾಜ್ಯಶಾಹಿಗಳು ವಿರೋಧಿಸಿದ್ದರೂ, ಈಗ ಅದರ ಬಗ್ಗೆ ಅವರು ಮೌನವಾಗಿದ್ದಾರೆ ಮಾತ್ರವಲ್ಲ ಆ ಯೋಜನೆಗೆ ಅವರಿಂದ ಸಹಾಯ ಸಿಗಲೂ ಬಹುದು.

ಕಳೆದ ವರ್ಷ ನಡೆದ ಅಲಿಪ್ತ ರಾಷ್ಟ್ರಗಳ ಸಭೆಗೆ ಪಾಕಿಸ್ತಾನ ಪ್ರವೇಶ ಬಯಸಿತ್ತು. ಅದಕ್ಕಾಗಿ ಅದು ತಾನು ಯಾವುದೇ ಸಾಮ್ರಾಜ್ಯಶಾಹಿ ದೇಶದೊಂದಿಗೆ ಒಪ್ಪಂದ ಮಾಡಿಕೊಂಡಿಲ್ಲವೆಂದಿತ್ತು. ಇದನ್ನು ನಂಬಿದ ಕೆಲವು ರಾಷ್ಟ್ರಗಳು ಅದರ ಈ ಬೇಡಿಕೆಯನ್ನು ಪ್ರಬಲವಾಗಿ ಬೆಂಬಲಿಸಿದ್ದುವು. ಪರಿಣಾಮವಾಗಿ ಹವಾನಾದಲ್ಲಿ ನಡೆದ ಸಭೆಯಲ್ಲಿ ಪಾಕಿಸ್ತಾನವನ್ನು ಅಲಿಪ್ತ ರಾಷ್ಟ್ರಗಳ ಒಕ್ಕೂಟಕ್ಕೆ ಸೇರಿಸಿಕೊಳ್ಳಲಾಯಿತು.

ಅಲಿಪ್ತತೆಯಿಂದ ಯಾವ ಪ್ರಯೋಜನವೂ ಇಲ್ಲವೆಂದು ಅರಿತ ಜಿಯಾ ಈಗ 1959ರ ಪಾಕಿಸ್ತಾನ-ಅಮೆರಿಕ ಒಪ್ಪಂದವನ್ನು ಊರ್ಜಿತಗೊಳಿಸಿದ್ದಾರೆ. ಆ ಒಪ್ಪಂದದ ನಿಜವಾದ ಅರ್ಥವನ್ನು ಭಾರತ-ಪಾಕಿಸ್ತಾನಗಳೊಳಗೆ ನಡೆದ ಎರಡು ಯುದ್ಧಗಳ ಹಿನ್ನೆಲೆಯಲ್ಲಿ ಮತ್ತು ಈ ಯುದ್ಧಗಳಲ್ಲಿ ಸಾಮ್ರಾಜ್ಯಶಾಹಿಗಳು ವಹಿಸಿದ ಪಾತ್ರದ ಹಿನ್ನೆಲೆಯಲ್ಲಿ ಮಾಡಿಕೊಳ್ಳಬೇಕು. ಒಪ್ಪಂದದ ಪ್ರಕಾರ, ಪಾಕಿಸ್ತಾನದ ಮೇಲೆ ಆಕ್ರಮಣವಾದಾಗ, ಅಮೆರಿಕ ಸರಕಾರವು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಲ್ಲದೆ, ತನ್ನ ಸೈನ್ಯವನ್ನು ಉಪಯೋಗಿಸಲೂ ಹಿಂಜರಿಯುವುದಿಲ್ಲ, ಮತ್ತು ಪಾಕಿಸ್ತಾನಕ್ಕೆ ಆರ್ಥಿಕ ಮತ್ತು ಮಿಲಿಟರಿ ನೆರವು ನೀಡುವುದನ್ನು ಮುಂದುವರಿಸುತ್ತದೆ. ಪಾಕಿಸ್ತಾನದ ಸ್ವಾತಂತ್ರ್ಯ ಮತ್ತು ಐಕ್ಯತೆಗಳನ್ನು ರಕ್ಷಿಸುವುದು ತನ್ನ ದೇಶದ ಹಿತಾಸಕ್ತಿಗಳಿಗೆ ಮತ್ತು ಜಾಗತಿಕ ಶಾಂತಿಗೆ ಅತೀ ಅಗತ್ಯವೆಂದು ಅಮೆರಿಕ ಸರಕಾರ ಭಾವಿಸುತ್ತಿದೆಯೆಂದು ಒಪ್ಪಂದದ ಪ್ರಸ್ತಾವನೆ (preamble) ಯಲ್ಲಿ ಹೇಳಲಾಗಿದೆ.

ಈ ಒಪ್ಪಂದ ಮಾಡಿಕೊಂಡಾಗ, ಪಾಕಿಸ್ತಾನಕ್ಕೆ ಅಫ್‌ಘಾನಿಸ್ತಾನದಿಂದ ಯಾವ ಅಪಾಯದ ಸೂಚನೆಯೂ ಇರಲಿಲ್ಲ. ಆದ್ದರಿಂದ ಇದು ಯಾರ ವಿರುದ್ಧ ಮಾಡಿಕೊಂಡ ಒಪ್ಪಂದ ಮತ್ತು ಯಾರು ಆ ಆಕ್ರಮಣಕಾರನೆಂಬ ಪ್ರಶ್ನೆಗಳು ಸಹಜವಾಗಿಯೇ ಉದ್ಭವಿಸುತ್ತವೆ. ಭಾರತವನ್ನೇ ಉದ್ದೇಶಿಸಿ ಈ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆಯಲ್ಲದೆ, ಅದು ಏಶಿಯಾದ ಜನರೆಲ್ಲರನ್ನೂ ತನ್ನ ಅಂಕೆಯೊಳಗಿರಿಸಿಕೊಳ್ಳಲು ಅವರು ಪರಸ್ಪರ ಹೊಡೆದಾಡುವಂತೆ ಮಾಡುವ ಅಮೆರಿಕದ ಸಾಧನವಾಗಿದೆ.

ಜಿಯಾ-ಉಲ್-ಹಕ್‌ರವರ ವಿದೇಶ ವ್ಯವಹಾರಗಳ ಸಲಹೆಗಾರ ಆಗಾಶಾಹಿಯವರು ಯು. ಎಸ್. ನ್ಯೂಸ್ ಅಂಡ್ ವರ್ಲ್ಡ್ ರಿಪೋರ್ಟ್ ಎಂಬ ಪತ್ರಿಕೆಗಿತ್ತ ಹೇಳಿಕೆಯಿಂದ ಪಾಕಿಸ್ತಾನದ ನಿಜವಾದ ಉದ್ದೇಶ ಬಯಲಾಗಿದೆ. ಅವರು "ರಶ್ಯಾದ ಸೈನ್ಯವು ನಮ್ಮ ಬಾಗಿಲಲ್ಲೇ ಕಾಣಿಸಿದಾಗಲೂ, ನಮಗಿರುವ ನಿಜವಾದ ಅಪಾಯ ಭಾರತದಿಂದಲೇ" ಎಂದಿದ್ದಾರೆ.

ದೀರ್ಘಕಾಲದ ಪರಸ್ಪರ ದ್ವೇಷಪೂರಿತ, ಪ್ರಚಾರ, ಸಂದೇಹ ಮತ್ತು ತಪ್ಪು ತಿಳುವಳಿಕೆಗಳ ಬಳಿಕ ಸಮಾವೇಶಗೊಂಡ ಈ ಭೇಟಿಯು ನಿಜಕ್ಕೂ ಬಹಳ ಮಹತ್ವಪೂರ್ಣವಾಗಿತ್ತು. ಉಭಯ ದೇಶಗಳ ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಶಕ್ತಿಗಳು ಈ ಕೆಟ್ಟ ಪರಂಪರೆಯ ಅಂತ್ಯವನ್ನು ಬಯಸುತ್ತಿದ್ದುವು. ಆದ್ದರಿಂದ, ಹಿಂದಿನ ನಷ್ಟವನ್ನು ಸರಿಪಡಿಸಲು ಸಾಮ್ರಾಜ್ಯಶಾಹಿ ವಿರೋಧಿ ಅಲಿಪ್ತ ನೀತಿಯ ಆಧಾರದಲ್ಲಿ ಉತ್ತಮ

— ಬಿ. ಟಿ. ರಣದಿವೆ

ನೆರೆಯ ಸಂಬಂಧಗಳನ್ನು ಸ್ಥಾಪಿಸುವ ಅವಶ್ಯಕತೆಯಿತ್ತು. ಆದರೆ ಈ ಭೇಟಿಯ ಹಿನ್ನೆಲೆ ಮತ್ತು ಸಂದರ್ಭಗಳು, ಯಥಾಸ್ಥಿತಿಗೆ (normalcy) ಮರಳುವುದನ್ನು ಮುಂಚಿತವಾಗಿಯೇ ತಡೆಹಿಡಿದಿದ್ದುವು. ಅದಕ್ಕಾಗಿ ಸಾಮ್ರಾಜ್ಯಶಾಹಿಗಳು ಮುಂಚಿತವಾಗಿಯೇ ಕಾರ್ಯತತ್ಪರರಾಗಿದ್ದರು ಮತ್ತು ಅವರನ್ನು ತಡೆಯುವುದು ಅಸಾಧ್ಯವಿತ್ತು.

ಅಫ್‌ಘಾನ್ ಬೆಳವಣಿಗೆಗಳಿಂದ ಪಾಕಿಸ್ತಾನದ ಭದ್ರತೆಯ ಮೇಲೆ ಉಂಟಾದ ಪರಿಣಾಮಗಳ ಬಗ್ಗೆ ಭಾರತವು ನಿರ್ಲಿಪ್ತವಾಗಿಲ್ಲವೆಂದು ನಿಯೋಗವು ಹೇಳಿತ್ತು. ಭಾರತದ ಉದ್ದೇಶಗಳ ಬಗ್ಗೆ ಯಾವುದೇ ರೀತಿಯ ಭಯವೂ ಅಗತ್ಯವಿಲ್ಲವೆಂದೂ ಹೇಳಲಾಯಿತು. ಪಾಕಿಸ್ತಾನಕ್ಕೆ ಸರಬರಾಜಾಗುತ್ತಿರುವ ವಿದೇಶೀ ಶಸ್ತ್ರಾಸ್ತ್ರಗಳಿಂದ ಈ ವಲಯದಲ್ಲಿ ಅಸ್ಥಿರತೆಯು ವ್ಯಾಪಿಸುತ್ತಿದೆಯೆಂದೂ ತಿಳಿಸಲಾಗಿತ್ತು. ಪಾಕಿಸ್ತಾನವನ್ನು ಸಾಮ್ರಾಜ್ಯಶಾಹಿಗಳ ಹಿಡಿತದಿಂದ ಪಾರುಮಾಡುವ ಈ ಎಲ್ಲಾ ಪ್ರಯತ್ನಗಳೂ ಫಲಕಾರಿಯಾಗಲಿಲ್ಲವೆಂಬುದು ಅಲ್ಲಿನ ಮಿಲಿಟರಿ ಸರ್ವಾಧಿಕಾರಿಗಳ ಮನೋಭಾವದಿಂದ ಮತ್ತು ಬ್ರೆಜಿನ್‌ಸ್ಕಿಯವರ ಯಶಸ್ವೀ ಸಂದರ್ಶನದಿಂದ ವ್ಯಕ್ತವಾಗಿದೆ.

ಉಭಯ ದೇಶಗಳೊಳಗೆ ಉಂಟಾದ ತಪ್ಪು ತಿಳುವಳಿಕೆಯ ಪರಿಣಾಮವಾಗಿ ಭಾರತದ ಈ ಸದುದ್ದೇಶಗಳನ್ನು ಪಾಕಿಸ್ತಾನೀಯರು ನಂಬುವುದು ಕಷ್ಟ. ಅಲ್ಲದೆ, ದೇಶಕ್ಕೆ ಅಪಾಯವೊದಗಿದೆಯೆಂಬ ಹುಯಿಲೆದ್ದಾಗ, ಜನರು ಅದರ ಪ್ರಭಾವಕ್ಕೊಳಗಾಗುವುದು ಸಹಜ. ಇಂತಹ ಗೊಂದಲಮಯ ಮತ್ತು ತಪ್ಪು ತಿಳುವಳಿಕೆಗಳಿಂದ ಕೂಡಿದ ವಾತಾವರಣದಲ್ಲಿ ತಾನು ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯಗಳ ರಕ್ಷಕನೆಂದುಕೊಂಡು, ಅಮೆರಿಕದ ಮಿಲಿಟರಿ ನೆರವಿಗೆ ಕೈಚಾಚುವುದು ಪಾಕಿಸ್ತಾನದ ಮಿಲಿಟರಿ ಆಡಳಿತಕ್ಕೆ ಸುಲಭವಾಗುತ್ತದೆ.

ಅಫ್‌ಘಾನಿಸ್ತಾನದಲ್ಲಿ ಒಂದು ಪ್ರಜಾಸತ್ತಾತ್ಮಕ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೇ, ಅಲ್ಲಿನ ವ್ಯವಹಾರಗಳಲ್ಲಿ ಕೈಹಾಕಲು ಪಾಕಿಸ್ತಾನದ ನೆಲವನ್ನು ಸಾಮ್ರಾಜ್ಯಶಾಹಿಗಳು ಉಪಯೋಗಿಸುತ್ತಿದ್ದರೆಂಬ ವಿಚಾರ ಎಲ್ಲರಿಗೂ ತಿಳಿದಿದೆ. ಇದನ್ನು ಪಾಕಿಸ್ತಾನದ ನಾಯಕರಿಗೆ ಮನದಟ್ಟು ಮಾಡಲು ಭಾರತೀಯ ನಿಯೋಗಕ್ಕೆ ಸಾಧ್ಯವಾಗದಿದ್ದರೆ ಅದು ಭಾರತದ ಮಟ್ಟಿಗೆ ಒಂದು ದೊಡ್ಡ ಸೋಲು. ಯಾಕೆಂದರೆ, ಅಫ್‌ಘಾನಿಸ್ತಾನದಲ್ಲಿ ರಶ್ಯಾವು ಕೈಗೊಂಡ ಕ್ರಮವು ವಿಶ್ವಸಂಸ್ಥೆಯಲ್ಲಿ ಚರ್ಚಿಸಲ್ಪಟ್ಟಾಗ ಭಾರತದ ನಿಲುವು ಆದಾಗಿತ್ತು.

ಸಮಾಜವಾದಿ ರಾಷ್ಟ್ರಗಳನ್ನು ಸಾಮ್ರಾಜ್ಯಶಾಹಿ ರಾಷ್ಟ್ರಗಳೊಂದಿಗೆ ತುಲನೆಮಾಡಿ ಎರಡೂ ಒಂದೇ ಅನ್ನುವುದು ಸಮಾಜವಾದದ ಶತ್ರುಗಳ ಒಂದು ಸಾಮಾನ್ಯ ತಂತ್ರ. ಅಫ್‌ಘಾನಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ಸಾಮ್ರಾಜ್ಯಶಾಹಿ ಹಸ್ತಕ್ಷೇಪವನ್ನು ಜನರಲ್ ಜಿಯಾ ಬೆಂಬಲಿಸುತ್ತಿದ್ದಾರಲ್ಲದೆ, ಅದಕ್ಕಾಗಿ ಅವರು ಪಾಕಿಸ್ತಾನದ ನೆಲವನ್ನು ಉಪಯೋಗಿಸುತ್ತಿಲ್ಲವೆಂಬ ತಮ್ಮ ವಾದವನ್ನು ಎಲ್ಲರೂ ನಂಬಬೇಕೆಂದು ಬಯಸುತ್ತಿದ್ದಾರೆ. ಅಫ್‌ಘಾನಿಸ್ತಾನದಲ್ಲಿ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪವನ್ನು ತಡೆಯಲು ರಶ್ಯಾವು ಮುಂದೆ ಬಂದಾಗಲಷ್ಟೇ ತಮ್ಮ ದೇಶದ ಸಮಸ್ಯೆಗಳನ್ನು ಅಫ್‌ಘಾನರೇ ಪರಿಹರಿಸಿಕೊಳ್ಳಬೇಕೆಂಬ ಕಳಕಳಿ ಜನರಲ್ ಜಿಯಾರಿಗೆ ಉಂಟಾಯಿತು.

ಭಾರೀ ಪ್ರಮಾಣದ ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ತನ್ನ ದೇಶಕ್ಕೆ ತರಿಸುವ ಮೂಲಕ ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗಲು ಜಿಯಾರು ಮೊದಲೇ ನಿರ್ಧರಿಸಿದ್ದ ಕಾರಣ, ಈ ವಲಯಕ್ಕೆ ಶೀತಲ ಯುದ್ಧ ತರುವುದರ ವಿರುದ್ಧ ಭಾರತ ನೀಡಿದ ಎಚ್ಚರಿಕೆಗೆ ಅವರು ಏನೂ ಬೆಲೆ ಕೊಡುವುದಿಲ್ಲವೆಂಬುದು ಖಂಡಿತ. ತಮ್ಮ ದೇಶದ ಭದ್ರತೆಯ ನೆಪವೊಡ್ಡಿ ಅವರು ಅಮೆರಿಕನ್ ಸಲಹೆಗಾರರಿಗೆ ಪಾಕಿಸ್ತಾನದಲ್ಲಿ ಹರಡಲು ಬಿಡುವುದರ ಮೂಲಕ ದೇಶದ ಸ್ವಾತಂತ್ರ್ಯವನ್ನೇ ಬಲಿಗೊಟ್ಟಿದ್ದಾರೆ. ಅವರ ಈ ಮನೋಭಾವವು ಭಾರತ-ಪಾಕಿಸ್ತಾನಗಳ ಸ್ನೇಹವನ್ನು ಬಲಪಡಿಸಲು ಖಂಡಿತ ಸಹಕಾರಿಯಾಗುವುದಿಲ್ಲವೆನ್ನುವುದು ಸಿಮ್ಲಾ ಒಪ್ಪಂದದ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಅವರು ನೀಡಿದ ಹಾರಿಕೆಯ ಉತ್ತರಗಳಿಂದ ತಿಳಿಯುತ್ತದೆ.

"ಹಳತನ್ನು ಮರೆತು ಉತ್ತಮ ನೆರೆಯವರಾಗಿ ಬಾಳೋಣ ಮತ್ತು ಪರಸ್ಪರರ ಒಳಿತಿಗಾಗಿ ಶ್ರಮಿಸೋಣ; ಉಭಯ ದೇಶಗಳೂ ಶಾಂತಿಯುತ ಬಾಳ್ವೆ ನಡೆಸಬೇಕೆಂಬುದೇ ಪಾಕಿಸ್ತಾನೀಯರ ಆಶಯ"ವೆಂದು ಜಿಯಾ ಹೇಳಿದರು. ಭಾರತ-ಪಾಕಿಸ್ತಾನಗಳ ಒಳಿತನ್ನು ಬಯಸುವವರೆಲ್ಲರೂ ಇದನ್ನು ಒಪ್ಪುತ್ತಾರೆ ಮತ್ತು ಅದನ್ನು ಅನುಷ್ಠಾನಕ್ಕೆ ತರಲು ಶ್ರಮಿಸುವರೆಂಬುದು ಖಂಡಿತ. ಆದರೆ, ಅದು ಅಮೆರಿಕದ ಕೈಗೊಂಬೆಯಾಗುವುದರಿಂದ, ಅವರಿಂದ ಶಸ್ತ್ರಾಸ್ತ್ರಗಳನ್ನು ಪಡೆಯುವುದರಿಂದ ಮತ್ತು ಶೀತಲ ಯುದ್ಧವನ್ನು ಈ ವಲಯಕ್ಕೆ ಆಹ್ವಾನಿಸುವುದರಿಂದ ಸಾಧ್ಯವಿಲ್ಲ.

ಹಿಂದೆಂದೂ ಪಾಕಿಸ್ತಾನದ ಜನರು ತಮ್ಮ ಸ್ವಾತಂತ್ರ್ಯಕ್ಕೆ ಸಾಮ್ರಾಜ್ಯಶಾಹಿಗಳಿಂದ ಈ ರೀತಿಯ ಅಪಾಯ ಬಂದಿರುವುದನ್ನು ಕಂಡಿಲ್ಲ. ಮಿಲಿಟರಿ ಆಡಳಿತವು ಅವರ ಬಾಯಿಗೆ ಬೀಗ ಹಾಕಿದೆ, ಅವರಿಗೆ ಈ ಮತದಾನದ ಹಕ್ಕು ಮತ್ತು ಪತ್ರಿಕಾ ಸ್ವಾತಂತ್ರ್ಯಗಳಿಲ್ಲ. ಆದ್ದರಿಂದ, ಸಾಮ್ರಾಜ್ಯಶಾಹಿಗಳು ಪಾಕಿಸ್ತಾನದಲ್ಲಿ ನಡೆಸುತ್ತಿರುವ ಪಿತೂರಿಗಳನ್ನು ಬಯಲು ಮಾಡುವುದು ಮತ್ತು ಪಾಕಿಸ್ತಾನದ ಮಿಲಿಟರಿ ಆಡಳಿತದ ಜನವಿರೋಧೀ ನೀತಿಗಳನ್ನು ಕೊನೆಗಾಣಿಸುವುದು ಜಾಗತಿಕ ಪ್ರಜಾಸತ್ತಾತ್ಮಕ ಚಳವಳಿಯ ಆದ್ಯ ಕರ್ತವ್ಯವಾಗಿದೆ.

ಭಾರತದ ಜನರಿಗೆ ಇದೊಂದು ಸವಾಲು. ಈ ಮಿಲಿಟರಿ ನೆರವುಗಳಿಂದ ಏನಾಗಿದೆಯೆಂಬುದಕ್ಕೆ ಅವರು ಎರಡು ಯುದ್ಧಗಳಲ್ಲಿ ಅನುಭವಿಸಿದ ಯಾತನೆಯೇ ಸಾಕ್ಷಿ. ಮಿಲಿಟರಿ ವೆಚ್ಚದಲ್ಲಿ ಹೆಚ್ಚಳ, ತೆರಿಗೆಯಲ್ಲಿ ಹೆಚ್ಚಳ, ಸಾವಿರಾರು ಸಾವುನೋವುಗಳು, ಅನೇಕ ಪ್ರದೇಶಗಳ ನಾಶ-ಇವೇ ಉಪಖಂಡದಲ್ಲಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಕಾರಸ್ಥಾನದ ಫಲಗಳು.

ಆದರೆ ಈಗ ಸಾಮ್ರಾಜ್ಯಶಾಹಿಗಳು ಒಂದು ಅತ್ಯಂತ ಅಪಾಯಕಾರಿ ಆಟ ಆಡುತ್ತಿದ್ದಾರೆ. ಪಾಕಿಸ್ತಾನವನ್ನು ಅವರ ಕಾವಲು ಠಾಣ್ಯವನ್ನಾಗಿ, ಮತ್ತು ಆಯುಧಾಗಾರವನ್ನಾಗಿ ಪರಿವರ್ತಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಅಂದರೆ, ಈ ಉಪಖಂಡದ ಜನರ ಶಾಂತಿ, ಸ್ಥಿರತೆ ಮತ್ತು ಸ್ವಾತಂತ್ರ್ಯಗಳಿಗೆ ಧಕ್ಕೆಯುಂಟಾಗಿದೆ.

ಸಾಮ್ರಾಜ್ಯಶಾಹಿಗಳ ಈ ತಂತ್ರದ ವಿರುದ್ಧ ಹೋರಾಡುವುದು ಮತ್ತು ಅದರ ಪರಿಣಾಮದಿಂದ ಭಾರತ-ಪಾಕಿಸ್ತಾನಗಳನ್ನು ರಕ್ಷಿಸುವ ಹೊಣೆ ಭಾರತೀಯರ ಮೇಲಿದೆ. ಇದಕ್ಕೆ ದೇಶದಲ್ಲಿರುವ ಸಾಮ್ರಾಜ್ಯಶಾಹಿ ವಿರೋಧೀ ಮತ್ತು ಪ್ರಗತಿಪರ ಶಕ್ತಿಗಳು ಸಾಕಷ್ಟು ಮಟ್ಟಿಗೆ ಸಂಘಟಿತರಾಗಿದ್ದಾರೆ. ಸಂಸತ್ತಿನಲ್ಲಿ ಅಫ್‌ಘಾನ್ ಬೆಳವಣಿಗೆಯು ಚರ್ಚಿಸಲ್ಪಟ್ಟಾಗ, ಆರೆಸ್ಸೆಸ್ ನಿಯಂತ್ರಣದಲ್ಲಿರುವ ಜನತಾಪಕ್ಷವೊಂದನ್ನು ಬಿಟ್ಟರೆ, ಮಿಕ್ಕುಳಿದ ಎಲ್ಲಾ ವಿರೋಧ ಪಕ್ಷಗಳೂ ಅಮೆರಿಕದ ತಂತ್ರವನ್ನು ಬಯಲಿಗೆಳೆದಿವೆ.

ಭಾರತ ಸರಕಾರವು ತನ್ನ ವಿದೇಶ ನೀತಿಯನ್ನು ಬದಲಾಯಿಸುವಂತೆ ಮಾಡಲು ಸಾಮ್ರಾಜ್ಯಶಾಹಿಗಳು ಸರ್ವ ಪ್ರಯತ್ನವನ್ನು ಮಾಡುವರೆಂಬುದನ್ನು ಎಲ್ಲರೂ ತಿಳಿದಿರಬೇಕು. ಬಲವಾದ ಜನಾಭಿಪ್ರಾಯವನ್ನು ರೂಢಿಸುವುದರಿಂದ ಮಾತ್ರ ಈ ಅಪಾಯವನ್ನು ತಡೆಗಟ್ಟಬಹುದು. ಸರಕಾರವು ಸಾಮ್ರಾಜ್ಯಶಾಹಿ ವಿರೋಧೀ ನೀತಿಯನ್ನೇ ಮುಂದುವರಿಸುವಂತೆ ಮತ್ತು ಸಮಾಜವಾದಿ ರಾಷ್ಟ್ರಗಳೊಡನೆ ಸ್ನೇಹವನ್ನು ಇನ್ನೂ ಬಲಪಡಿಸುವಂತೆ ಮಾಡಲು ಜನರು ಸದಾ ಎಚ್ಚರದಿಂದಿದ್ದರೆ ಮಾತ್ರ ಸಾಧ್ಯ.

ಪಾಕಿಸ್ತಾನದ ಜನರು ಖಂಡಿತವಾಗಿಯೂ ಸಾಮ್ರಾಜ್ಯಶಾಹಿಗಳ ಮತ್ತು ತಮ್ಮ ದೇಶದ ಮಿಲಿಟರಿ ಆಡಳಿತದ ಈ ತಂತ್ರಗಳ ವಿರುದ್ಧ ಕೂಗೆಬ್ಬಿಸುವರು. ಇದಕ್ಕೆ ಸಾಕ್ಷಿಯಾಗಿ, ಪಾಕಿಸ್ತಾನದ ಮಾಜಿ ಏರ್ ಮಾರ್ಶಲ್ ಅಸ್ಗರ್ ಖಾನರು ಸ್ವದೇಶಾಭಿಮಾನಿ ಮತ್ತು ಸ್ವಾತಂತ್ರ್ಯಪ್ರಿಯ ಜನರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

ಅಮೆರಿಕದ ಸೋವಿಯತ್ ವಿರೋಧೀ ನೀತಿಯಲ್ಲಿ ಅದರ ಸ್ನೇಹಿತರಾದ ಇತರ ಪಾಶ್ಚಾತ್ಯ ರಾಷ್ಟ್ರಗಳಿಗೆ ಆಸಕ್ತಿಯಿಲ್ಲದಿರುವುದನ್ನು ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರಿ ತಿಳಿದಿರತಕ್ಕದ್ದು. ಮಾಸ್ಕೋ ಒಲಿಂಪಿಕ್ಸನ್ನು ಬಹಿಷ್ಕರಿಸುವ ಕರೆಯ ವಿರುದ್ಧ ಪ್ರತಿಭಟನೆ ಕಂಡುಬರುತ್ತಿದೆ. ರಶ್ಯಾದ ವಿರುದ್ಧ ಆರ್ಥಿಕ ಕ್ರಮಗಳನ್ನು ಕೈಗೊಳ್ಳುವುದರ ವಿರುದ್ಧ ಇನ್ನೂ ಹೆಚ್ಚಿನ ಪ್ರತಿಭಟನೆ ಕಾಣುತ್ತಿದೆ. ಶಸ್ತ್ರಾಸ್ತ್ರಗಳ ಪೈಪೋಟಿ ಮತ್ತು ಘರ್ಷಣೆಯ ನೀತಿಗೇ ಇನ್ನೂ ಪ್ರಬಲವಾದ ಪ್ರತಿಭಟನೆ ತೋರಿ ಬಂದಿದೆ. ತಮ್ಮ ಯುದ್ಧಗಳಿಗಾಗಿ ಇತರ ದೇಶದ ಜನರನ್ನು ಮತ್ತು ಅವರ ಹಿತಾಸಕ್ತಿಗಳನ್ನು ಸಾಮ್ರಾಜ್ಯಶಾಹಿಗಳು ಬಲಿಗೊಡುತ್ತಿದ್ದಾರೆಂಬುದನ್ನು ಎಲ್ಲರೂ ಬಲ್ಲರು. ಇದು ಪರಮಾಣು ಯುದ್ಧದಲ್ಲಿ ಕೊನೆಗೊಳ್ಳಬಹುದಾದ ಅತೀ ಅಪಾಯಕಾರಿ ಆಟವೆಂಬುದರ ಅರಿವು ಎಲ್ಲರಿಗೂ ಇದೆ. ಆದರೆ ಪಾಕಿಸ್ತಾನದ ಮಿಲಿಟರಿ ಆಡಳಿತಕ್ಕೆ ಮಾತ್ರ ಇದು ತಿಳಿದಿಲ್ಲವೆಂದು ಕಾಣುತ್ತದೆ.

ತಮ್ಮಿಂದ ಸಹಾಯವನ್ನು ಪಡೆಯುವ ಸರಕಾರಗಳನ್ನು ಸಾಮ್ರಾಜ್ಯಶಾಹಿಗಳು ಆಗಾಗ ಬದಲಿಸುತ್ತಾರೆಂಬ ವಿಚಾರ ಜನರಲ್ ಜಿಯಾ ದಕ್ಷಿಣ ವಿಯೆಟ್ನಾಂ ಮತ್ತು ದಕ್ಷಿಣ ಕೊರಿಯಾಗಳ ಅನುಭವದಿಂದ ತಿಳಿದಿರಬೇಕು. ಜನಾದರ ಕಳೆದುಕೊಳ್ಳುತ್ತಿರುವ ಸರಕಾರದಿಂದ ಅವರಿಗೆ ಏನೂ ಉಪಯೋಗವಿಲ್ಲ. ಜನರನ್ನು ಮೋಸಗೊಳಿಸಿ, ಅಮೆರಿಕಾ ಪರ ನೀತಿಯನ್ನು ಅವರು ಅನುಸರಿಸುವಂತೆ ಮಾಡಬಲ್ಲ ಸರಕಾರವೇ ಅವರಿಗೆ ಬೇಕಾದುದು. ಭುಟ್ಟೋ ಅವರ ಮರಣದಂಡನೆ ವಿರುದ್ಧ ಮತ್ತು ನಾಗರಿಕ ಹಕ್ಕುಗಳ ಉಲ್ಲಂಘನೆಗಾಗಿ ಜಿಯಾರನ್ನು ಅಮೆರಿಕದ ರಾಜ್ಯಾಂಗ ಕಾರ್ಯದರ್ಶಿ ಸೈರಸ್ ವಾನ್ಸ್ ಕಟುವಾಗಿ ಟೀಕಿಸಿದ್ದು ಕೇವಲ ಆಕಸ್ಮಿಕವಲ್ಲ. ಇದನ್ನು ಜನರಲ್ ಜಿಯಾ ತಿಳಿದಿರುವರೇ?

○

ಬೆಂಗಾಲ್ ಲ್ಯಾಂಪ್ ಕಾರ್ಮಿಕರ ಸಂಘಕ್ಕೆ ಸಿ.ಐ.ಟಿ.ಯು. ಮುಖಂಡರ ಆಯ್ಕೆ

ಬೆಂಗಳೂರು ನಗರದ ಮೂಲೆ ಮೂಲೆಗಳಲ್ಲಿ ಸಿ.ಐ.ಟಿ.ಯು. ನೇತೃತ್ವದಲ್ಲಿರುವ ಕಾರ್ಮಿಕರ ನ್ಯಾಯಯುತ ಸಂಪು, ಧರಣಿ, ಉಪವಾಸ ಸತ್ಯಾಗ್ರಹಗಳು, ಬಂಧನಗಳು, ನಿತ್ಯ ಸಂಗತಿಯಾಗಿವೆ.

ಇಂದಿನ ಅಸ್ಥಿರರಾಜಕೀಯ, ಮತ್ತು ರಾಜಕೀಯ ಮುಖಂಡರುಗಳು ಪಕ್ಷಾಂತರಗಳಿಂದಾಗಿ ಅವರ ಹಿಂದಿರುವ ಕಾರ್ಮಿಕ ಸಂಘಟನೆಗಳು ಸಹಜವಾಗಿ ಸಿ.ಐ.ಟಿ.ಯು.ನತ್ತ ಆಶಾಧಾಯಕವಾಗಿ ನೋಡುತ್ತಿವೆ. ಮೆಟಲ್ ಲ್ಯಾಂಪ್ ಕ್ಯಾಪ್ಸ್ ಕಾರ್ಮಿಕರ ದೀರ್ಘಯುತ ಹೋರಾಟ, ಇತ್ತೀಚಿನ ಮೈಕೋ ಕಾರ್ಮಿಕರ ಹೋರಾಟ, ಮೊದಲಾದವುಗಳಿಂದ ಈ ಬೆಳವಣಿಗೆಯು ತೀವ್ರಗೊಂಡಿದೆ. ಇದಕ್ಕೊಂದು ಉದಾಹರಣೆ ಬೆಂಗಾಲ್ ಲ್ಯಾಂಪ್ ಕಾರ್ಮಿಕ ಸಂಘದ ಚುನಾವಣಾ ಫಲಿತಾಂಶ.

ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾಂ, ಅವರು ಚುನಾವಣಾಧಿಕಾರಿಯಾಗಿ, 22-2-80 ರಂದು ನಡೆದ ಬೆಂಗಾಲ್ ಲ್ಯಾಂಪ್ ಕಾರ್ಮಿಕರ ಸಂಘದ ಚುನಾವಣೆಯಲ್ಲಿ ಸಿ.ಐ.ಟಿ.ಯು. ಕಾರ್ಯಕರ್ತರುಗಳು ಹಾಗೂ ಮುಖಂಡರುಗಳು ಭಾರೀ ಬಹುಮತದಿಂದ ಆಯ್ಕೆಯಾದರು.

ಸುಮಾರು ನಾನೂರು ಕಾರ್ಮಿಕರಿರುವ ಬೆಂಗಾಲ್ ಲ್ಯಾಂಪ್ ಕಾರ್ಮಿಕರ ಸಂಘಕ್ಕೆ ಕಾಂ. ಎಸ್. ಸೂರ್ಯನಾರಾಯಣರಾವ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಉಪಾಧ್ಯಕ್ಷರಾಗಿ ಕಾಂ. ಬಿ. ಎಸ್. ಸೀನಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಎ. ಚಂದ್ರಶೇಖರ್, ಉಪಕಾರ್ಯದರ್ಶಿಗಳಾಗಿ ಕಾಂ. ಮರೀಗೌಡ, ಮಾಸ್ತಿಗೌಡ, ಖಜಾಂಚಿಯಾಗಿ ಟಿ. ವೆಂಕಟರಾಮಯ್ಯ ಇವರುಗಳು ಆಯ್ಕೆಯಾಗಿದ್ದಾರೆ.

○

ಕುಂದಾಪುರದಲ್ಲಿ ಪುಸ್ತಕ ಪ್ರದರ್ಶನ

ದ.ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಭಂಡಾರ್ಕಾರ್ಸ್ ಕಾಲೇಜಿನ "ಕಾಲೇಜ್‌ಡೇ"ಗೆ ಎಸ್.ಎಫ್.ಐ.ನವರು ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವು ವಿಶೇಷ ಆಕರ್ಷಣೆಯನ್ನು ಒದಗಿಸಿತ್ತು. ಫೆಬ್ರುವರಿ 28ರಿಂದ ಮಾರ್ಚಿ 2ರವರೆಗೆ ಎಸ್.ಎಫ್.ಐ. ತಾಲ್ಲೂಕು ಸಮಿತಿಯವರು ಏರ್ಪಡಿಸಿದ್ದ ಈ ಕಾರ್ಯಕ್ರಮ ಬಹಳಷ್ಟು ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಗಮನ ಸೆಳೆದಿತ್ತು. ಈ ಹಿಂದೆ ಕಡ್ಡಾಯ ಡೊನೇಶನ್ ವಿರೋಧಿಸಿ ಎಸ್.ಎಫ್.ಐ.ಯವರು ಕರಪತ್ರ ಹೊರಡಿಸಿದ್ದರು. ಮಾರ್ಚಿ 1ರಂದು ನಡೆದ ಸ್ಥಳೀಯ ಕೋಣಿಗ್ರಾಮದ ಯುವಕ ಮಂಡಲದ ವಾರ್ಷಿಕೋತ್ಸವದಲ್ಲೂ ಎಸ್.ಎಫ್.ಐ.ನವರು ಪುಸ್ತಕ ಪ್ರದರ್ಶನ ಏರ್ಪಡಿಸಿದ್ದರು.

●

ಕೋಣಿ ಯುವಕ ಮಂಡಲದ 4ನೇ ವಾರ್ಷಿಕೋತ್ಸವ

ಕೋಣಿ ಗ್ರಾಮದ ಯುವಕ ಮಂಡಳಿಯ 4ನೇ ವಾರ್ಷಿಕೋತ್ಸವವು ಇತ್ತೀಚೆಗೆ ಕೋಣಿಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀ ಕೆ. ಮೋಹನದಾಸ್ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಶ್ರೀ ಕೆ. ಜೋನ್ ಡಿಸೋಜ ಉತ್ಸವ ಸಮಿತಿ ಅಧ್ಯಕ್ಷ ಇವರು ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಶ್ರೀ ಕೆ. ಗುರುರಾಜ ಇವರು ವರದಿ ವಾಚನ ಮಾಡಿದರು. ವಿವೇಕ ಜ್ಯೂನಿಯರ್ ಕಾಲೇಜು ಪ್ರಾಂಶುಪಾಲರಾದ ಶ್ರೀ ಕೆ. ರಾಮಚಂದ್ರ ಉಡುಪ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಂಘದ ಚಟುವಟಿಕೆಗಳನ್ನು ಪ್ರಶಂಶಿಸಿದರು. ಮತ್ತು ಸಮಾಜ ಸೇವಾ ಕಾರ್ಯದಲ್ಲಿ ಯುವಕರ ಕರ್ತವ್ಯದ ಕುರಿತು ಹೇಳಿದರು. ಶ್ರೀ ಬಿ. ಎಚ್. ಅಲ್ಲಿ ಸಾಹೇಬ್, ಮುಖ್ಯೋಪಾಧ್ಯಾಯ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕೋಣಿ ಇವರು ಬಹುಮಾನ ವಿತರಣೆ ಮಾಡಿದರು.

ಶ್ರೀಮತಿ ಪ್ರೆಸಿಲ್ಲ ಡೇಸ ರಿಟೈರ್ಡ್ ಟೀಚರ್ ಕೋಣಿ ಇವರ ಭಾವ ಚಿತ್ರ ಅನಾವರಣ ಮಾಡಲಾಯಿತು. ಶ್ರೀ ಗಣೇಶ ಕಾರಂತ ಅಧ್ಯಕ್ಷ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಕುಂದಾಪುರ ಘಟಕ ಇವರು ಶ್ರೀಮತಿ ಪ್ರಿಸಿಲ್ಲ ಡೇಸರ ಕುರಿತು ಅಭಿನಂದನಾ ಭಾಷಣ ಮಾಡಿದರು. ಶ್ರೀ ನಾರಾಯಣ ಆಚಾರ್ಯ ಕೋಣಿ ಸಂದೇಶ ವಾಚನಗೈದರು. ಶ್ರೀ ಕೆ. ಆನಂದ ಭಂಡಾರಿ ಸಭೆಗೆ ವಂದಿಸಿದರು.

ಸಮಾರಂಭದ ಅಂಗವಾಗಿ ಶಾಲಾ ಮಕ್ಕಳಿಂದ ನೃತ್ಯ ಮತ್ತು "ಸಮುದಾಯ ಕುಂದಾಪುರ" ಇವರಿಂದ ನಾಟಕ ಕಾರ್ಯಕ್ರಮವಿತ್ತು. ಶ್ರೀ ವಿ. ಶಿವಸ್ವಾಮಿ ಹೊಳ್ಳ ನಿರ್ದೇಶಿತ "ಆಹುತಿ", ಶ್ರೀ ಬಾಬು ಶೆಟ್ಟಿ ಅಧ್ಯಕ್ಷಗೆಳೆಯರ ಬಳಗ ಹಂಗಳೂರು ನಿರ್ದೇಶಿತ ಎಲ್ಲಿದೆ ನರಕ?! ಮತ್ತು ಶ್ರೀ ಎನ್. ಕೆ. ಹೆಬ್ಬಾರ್ ಕೋಣಿ ನಿರ್ದೇಶಿತ ಮದ್ವೆ ಬೇಕೇ? ನಾಟಕ ಪ್ರದರ್ಶನ ಜರಗಿತು. ಈ ಕಾರ್ಯಕ್ರಮವನ್ನು ಶ್ರೀ ವೆಂಕಟೇಶ ನಾಯಕ್ ಕೋಣಿ ಇವರು ನಿರ್ದೇಶಿಸಿದ್ದರು.

○

ನಿಧನ

ಮಂಗಳೂರಿನ ಜಪ್ಪಿನಮೊಗರು ಗ್ರಾಮ ತಂದೋಳಿಗೆಯಲ್ಲಿ ವಾಸವಾಗಿರುವ ಕಾಂ. ತಿಮ್ಮಪ್ಪ ಪೂಜಾರಿಯವರು ತಾ. 25-2-80 ರಂದು ಅಸ್ವಸ್ಥದಿಂದ ನಿಧನರಾಗಿದ್ದಾರೆ. ಶ್ರೀಯುತರಿಗೆ 40 ವರುಷ ಪ್ರಾಯವಾಗಿರುತ್ತದೆ. ಶ್ರೀಯುತರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭಿಮಾನಿಯಾ ಕಮ್ಯುನಿಸ್ಟ್ ಪಕ್ಷದ ಏಳಿಗೆಗೆ ಅನೇಕ ವರ್ಷದಿಂದ ದುಡಿಯುತ್ತಾ ಬಂದಿದ್ದಾರೆ. ಇವರಿಗೆ ಜಪ್ಪಿನಮೊಗರು ಪಾರ್ಟಿ ಶಾಖೆಯು ತನ್ನ ಸಂತಾಪ ಸೂಚಿಸಿದೆ.

●

ಯುವಕ ಮಂಡಳಿಯ ಸ್ಥಾಪನೆ

ದ.ಕ.ಜಿಲ್ಲೆ, ಕುಂದಾಪುರ ತಾಲೂಕಿನ ಖಾರ್ವಿಕೇರಿ ಗ್ರಾಮದಲ್ಲಿ ತಾರೀಕು 24-2-1980 ರಂದು ಯುವಕ ಮಂಡಳಿಯ ಸ್ಥಾಪನೆಯಾಯಿತು. ಪ್ರಾರಂಭದಲ್ಲಿ ಕಾಂ. ಮೋಹನ ಸಾರಂಗರವರು ಕ್ರಾಂತಿಗೀತೆಗಳನ್ನು ಹಾಡಿದರು. ಕಾಂ. ಶಂಕರ ಖಾರ್ವಿಯವರು ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸುತ್ತಾ, "ಅಂಧಶ್ರದ್ಧೆ, ಮೂಢನಂಬಿಕೆ, ಅನ್ಯಾಯ, ಶೋಷಣೆಗಳನ್ನು ಎದುರಿಸಿ ಹೋರಾಡುವುದೇ ಸಂಘದ ಮುಖ್ಯ ಉದ್ದೇಶವಾಗಿದೆ" ಎಂದು ತಿಳಿಸಿದರು.

ಕಾಂ. ವಿ. ಮಹಾಬಲ, ಕಾರ್ಯದರ್ಶಿ, ತಾಲೂಕು ಯುವಕ ಸಮಿತಿ ಇವರು ನಮ್ಮ ದೇಶದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ದಲಿತರ ಏಳಿಗೆಯಾಗಬೇಕಾದರೆ ವೈಜ್ಞಾನಿಕ ಸಮಾಜವಾದದ ನೆಲೆಯಲ್ಲಿ ಸಂಘಟನೆಯಾಗಿ ಹೋರಾಟ ಮಾಡುವುದರಿಂದ ಮಾತ್ರವಾಗುತ್ತದೆ" ಎಂದು ಅವರು ಹೇಳಿದರು.

ಆ ಮೇಲೆ ಈ ಕೆಳಗಿನ ಸಮಿತಿಯನ್ನು ರಚಿಸಲಾಯಿತು:

ಶ್ರೀಯುತ ಕಾಂ. ಶಂಕರ ಖಾರ್ವಿ
ಅಧ್ಯಕ್ಷ

ಶ್ರೀಯುತ ಕಾಂ. ಮೋಹನ ಸಾರಂಗ
ಕಾರ್ಯದರ್ಶಿ

ಶ್ರೀಯುತ ಕಾಂ. ರಾಮಚಂದ್ರ ಖಾರ್ವಿ
ಉಪಾಧ್ಯಕ್ಷ

ಶ್ರೀಯುತ ಕಾಂ. ರಾಮ ಮೊಗವೀರ
ಜತೆ ಕಾರ್ಯದರ್ಶಿ

ಶ್ರೀಯುತ ಕಾಂ. ಗಣಪತಿ ಖಾರ್ವಿ ಕೆ.
ಖಜಾಂಚಿ

ಕಾರ್ಯಕಾರಿ ಸಮಿತಿ ಸದಸ್ಯರು:

ಶ್ರೀಯುತರುಗಳಾದ ಕೆ. ಶೀನ ಖಾರ್ವಿ, ಗಣಪತಿ ಎಸ್, ರಾಮಚಂದ್ರ ಖಾರ್ವಿ, ವಿಶ್ವನಾಥ ಸಾರಂಗ, ಉಮಾನಾಥ ಖಾರ್ವಿ, ಜನಾರ್ಧನ ಖಾರ್ವಿ, ನಾಗರಾಜ ಸಾರಂಗ.

ಕೊನೆಯಲ್ಲಿ ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ಮಂಜೇಶ್ವರದಲ್ಲಿ ಕೇರಳ ಮುಖ್ಯಮಂತ್ರಿ

ಗುಂಡೂರಾಯರಿಗೆ ಕಾಸರಗೋಡಿನ ಚಿಂತೆ ಬೇಡ

ದಕ್ಷಿಣ ಕನ್ನಡ ಹಾಗೂ ಕಾಸರಗೋಡು ವಿಭಾಗದ ತುಳುಭಾಷಾ ಅಲ್ಪಸಂಖ್ಯಾತರ ಬಗ್ಗೆ ಯಾವ ಕನಿಕರವೂ ಇಲ್ಲದೆ, ತುಳುಭಾಷೆಯನ್ನೇ ಒಪ್ಪದೆ, ಕಾಸರಗೋಡಿನ ಕನ್ನಡಿಗರ ಬಗ್ಗೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಗುಂಡೂರಾವ್ ಕಳಕಳಿ ವ್ಯಕ್ತಪಡಿಸಿರುವುದು ಕೇವಲ ರಾಜಕೀಯ ಲಾಭಕ್ಕಾಗಿ ಮಾತ್ರವೇ ಹೊರತು ಜನತೆಯ ಹಿತದೃಷ್ಟಿಯಿಂದ ಅಲ್ಲ ಎಂದು ಕೇರಳದ ಮುಖ್ಯಮಂತ್ರಿ ಕಾಂ. ಇ. ಕೆ. ನಯನಾರ್ ಅವರು ಮಂಜೇಶ್ವರದಲ್ಲಿ ನಡೆದ ಸನ್ಮಾನ ಸಭೆಯಲ್ಲಿ ಹೇಳಿದರು. ಕಾಸರಗೋಡಿನ ಪ್ರಶ್ನೆಗಳ ಬಗ್ಗೆ ತಯಾರಿಸಿದ ಮಹಾಜನ್ ವರದಿಯನ್ನು ಕೇರಳ ಸರಕಾರ ಅಂಗೀಕರಿಸಲಿಲ್ಲ. ಅಲ್ಲದೆ ಆ ಸಮಿತಿಯಲ್ಲಿ ಕಾಸರಗೋಡಿನ ಪ್ರತಿನಿಧಿಗಳೂ ಇರಲಿಲ್ಲ. ಈ ಬಗ್ಗೆ ನಿಶ್ಚಿತ ಕಾರ್ಯಕ್ರಮ. ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರ ಕೇಂದ್ರ ಸರಕಾರಕ್ಕಿದೆಯೇ ಹೊರತು ತಮ್ಮ ಸರಕಾರಕ್ಕೆ ಇಲ್ಲ. ಆದರೆ ಅಲ್ಪಸಂಖ್ಯಾತರ ಹಿತರಕ್ಷಣೆಗೆ ಬೇಕಾದ ಎಲ್ಲ ಕಾರ್ಯಕ್ರಮಗಳನ್ನು (ಚಂದ್ರಭಾನು ಸಮಿತಿ ವರದಿಯ ಸಲಹೆಗಳಂತೆ) ತಮ್ಮ ಸರಕಾರ ಕೈಗೊಳ್ಳುವುದೆಂದು ಕಾಂ. ನಯನಾರ್ ಆಶ್ವಾಸನೆ ನೀಡಿದರು.

ಈ ಸಭೆಯಲ್ಲಿ ಕೇರಳದ ನೀರಾವರಿ ಸಚಿವ ಡಾ. ಎ. ಸುಬ್ಬರಾವ್ ಮತ್ತು ಕಾಸರಗೋಡಿನ ಲೋಕಸಭಾ ಸದಸ್ಯ ಕಾಂ. ರಾಮಣ್ಣ ರೈ ಅವರು ಭಾಗವಹಿಸಿದ್ದರು.

●

ಆರ್ಥಿಕ ಸಮೀಕ್ಷೆ :

[3ನೇ ಪುಟದಿಂದ]

1975ರಲ್ಲಿ 175.8ಕ್ಕೇರಿತು ಮುಂದೆ ತುರ್ತುಪರಿಸ್ಥಿತಿಯಲ್ಲಿ 1976ರಲ್ಲಿ ಈ ಬೆಲೆಸೂಚಿಯು 172.4ಕ್ಕೆ ಇಳಿದರೂ 1977ರಲ್ಲಿ ಪುನಃ 185.4 ಕ್ಕೇರಿತು. ಇಂದು 226.7ಕ್ಕೇರಿದೆ. ಹಾಗೆಯೇ, ಕೈಗಾರಿಕಾ ಕಾರ್ಮಿಕರಿಗೆ ಸಂಬಂಧಿಸಿದ ಗ್ರಾಹಕರ ಬೆಲೆಸೂಚಿ (1960 =100)ಯು 1970-71 ರಲ್ಲಿ 186 ಆಗಿದ್ದು, 1974-75 ರಲ್ಲಿ 317ಕ್ಕೇರಿತು. ಮುಂದೆ ತುರ್ತುಪರಿಸ್ಥಿತಿಯಲ್ಲಿ 1975-76 ರಲ್ಲಿ ಮತ್ತು 1976-77 ರಲ್ಲಿ ಈ ಬೆಲೆ ಸೂಚಿಯು 313 ಮತ್ತು 301ಕ್ಕಿಳಿಯಿತು, ಈಗ 380ಕ್ಕೆ ಮುಟ್ಟಿದೆ. ಬಂಡವಾಳಶಾಹಿ ಪದ್ಧತಿಯುಲ್ಲಿ ಬೆಲೆಗಳು ಏರುತ್ತಲೇ ಇರುವುವು. ಸ್ವಲ್ಪ ಕಾಲ ಕಾರ್ಮಿಕರ ಮತ್ತು ಇತರ ದುಡಿಯುವ ಜನರ ಗ್ರಾಹಕ ಶಕ್ತಿಯು ಕುಸಿದಾಗ ಬೆಲೆಗಳು ಏರಿಕೆಯಲ್ಲಿಯೇ ಸ್ಥಿರಗೊಳ್ಳುವುವು. ಮುಂದೆ ಪುನಃ ಬೆಲೆಗಳು ಏರಲಾರಂಭಿಸುವುವು.

ಬೆಲೆನಿಯಂತ್ರಿಸಲು, ಇಳಿಸಲು ಈ ಕೆಳಗಿನ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.

1. ಆಹಾರಧಾನ್ಯಗಳು, ಬೇಳೆಕಾಳುಗಳು, ಅಡಿಗೆತ್ಯೆಲ, ಸೀಮೆಎಣ್ಣೆ, ಕಾಗದ, ಸಾಬೂನು, ಬಟ್ಟೆ, ಸಕ್ಕರೆ, ಬೆಂಕಿಪೆಟ್ಟಿಗೆ ಇತ್ಯಾದಿ ಕೆಲವು ಜೀವನಾವಶ್ಯಕ ಸಾಮಗ್ರಿಗಳನ್ನು ಸಾರ್ವಜನಿಕವಾಗಿ ಖರೀದಿಸಿ ಸಾರ್ವಜನಿಕ ಚಿಲ್ಲರೆ ಅಂಗಡಿಗಳಲ್ಲಿ ದೇಶಾದ್ಯಂತ ಸಮಾನ ಹಾಗೂ ಸುಲಭ ಬೆಲೆಗಳಲ್ಲಿ ವಿತರಣೆ ಮಾಡಬೇಕು, ಇಂತಹ ಸಾರ್ವಜನಿಕವಿತರಣಾವ್ಯವಸ್ಥೆಗೆ ಸರಕಾರ ಸಾಕಷ್ಟು ಧನ ಸಹಾಯ ಮಾಡಬೇಕು. ಸರಕಾರದ ಏಜನ್ಸಿಗಳು ಇಂತಹ ಅವಶ್ಯಕ ವಸ್ತುಗಳ ರಾಷ್ಟ್ರವ್ಯಾಪಿ ದಾಸ್ತಾನು ಇಡಬೇಕು.

2. ಗುತ್ತೇದಾರಿ ಬಂಡವಾಳಶಾಹಿಗಳಿಗೆ ಸರಕಾರದ ಸಹಾಯಧನ ಮತ್ತು ಬ್ಯಾಂಕುಗಳ ಸಾಲ ಕಡಿತಗೊಳಿಸಿ ರೋಗಗ್ರಸ್ತ ಸಂಸ್ಥೆಗಳಿಗೂ, ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಿಗೂ ಮತ್ತು ಸಣ್ಣ ಉದ್ಯಮಗಳ ಸಂಸ್ಥೆಗಳಿಗೂ ಉದಾರವಾಗಿ ಸಹಾಯ ಸಾಲ ಸೌಲಭ್ಯಗಳನ್ನು ನೀಡಬೇಕು.

3. ಸಕ್ಕರೆ, ಮುಂತಾದ ಕೊರತೆ ಇರುವ ಅವಶ್ಯಕ ಸಾಮಗ್ರಿಗಳ ರಪ್ತು ನಿಶೇಧಿಸಬೇಕು. ಡೀಸೇಲ್, ಅಡಿಗೆ ತೈಲ, ಮುಂತಾದ ಅವಶ್ಯ ವಸ್ತುಗಳನ್ನು ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾರ್ವಜನಿಕ ಸಂಸ್ಥೆಗಳೇ ಆಮದು ಮಾಡಿಕೊಂಡು ಸಾರ್ವಜನಿಕ ವಿತರಣೆಗೆ ಒಪ್ಪಿಸಲುಗೊಳಿಸಬೇಕು.

4. ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆಗಳನ್ನು ತುಂಬಾ ಇಳಿಸಬೇಕು, ಆರ್ಥಿಕ ಅಭಿವೃದ್ಧಿಗೆ ಸಂಪನ್ಮೂಲ ಸಂಗ್ರಹಿಸಲು ಪ್ರತ್ಯಕ್ಷ ತೆರಿಗೆಯನ್ನೇ ಹೆಚ್ಚಾಗಿ ಅವಲಂಬಿಸಬೇಕು. ಕೊರತೆ ಹಣ ಸೃಷ್ಟಿ ಮಾಡುವುದನ್ನು ನಿಲ್ಲಿಸಬೇಕು. ಅನುತ್ಪಾದಿತ ವಿಷಯುಗಳಿಗೆ, ಆಡಳಿತ, ಪೋಲೀಸು, ಮಿಲಿಟರಿ, ಇತ್ಯಾದಿ ಇಲಾಖೆಗಳಿಗೆ ಖರ್ಚು ಕಡಿಮೆಮಾಡಿ ಉತ್ಪಾದನೆ ಹೆಚ್ಚಿಸುವ ಹಾಗೂ ಉದ್ಯೋಗ ಹೆಚ್ಚಿಸುವ ಆರ್ಥಿಕ ಯೋಜನೆಗಳಲ್ಲಿ ಹೆಚ್ಚು ಹೆಚ್ಚು ಹಣ ವಿನಿಯೋಗಿಸಬೇಕು.

5. ಅಕ್ರಮ ಸಂಗ್ರಹಗಾರರನ್ನು, ಕಾಳಸಂತೆ ಕದೀಮರನ್ನು, ಕಳ್ಳ ಸಾಗಾಣಿಕೆಗಾರರನ್ನು, ತೆರಿಗೆ ತಪ್ಪಿಸುವವರನ್ನು ಕಠಿಣ ಶಿಕ್ಷೆಗಳಿಗೆ ಗುರಿಪಡಿಸಬೇಕು. ಕಪ್ಪುಹಣವನ್ನು ಬಯಲಿಗೆಳೆಯಬೇಕು ಮತ್ತು ಅದಕ್ಕೆ ಸಂಬಂಧಪಟ್ಟವರ ಆಸ್ತಿ ಆದಾಯಗಳಿಗೆ ಮುಟ್ಟುಗೋಲು ಹಾಕಬೇಕು, ಕೇವಲ ಬಾಯಿ ಮಾತಿನ ಬೆದರಿಕೆಯಿಂದ ಪ್ರಯೋಜನವಿಲ್ಲ. ಇಂತಹ ಕ್ರಮಗಳನ್ನು ಇಂದಿರಾ ಗಾಂಧಿ ಸರಕಾರ ಕೈಗೊಳ್ಳುವುದೆ?

●

ರೈಲ್ವೆ ಕಾರ್ಮಿಕರ ಪ್ರತಿಭಟನಾ ಪ್ರದರ್ಶನ

ದಕ್ಷಿಣ ರೈಲ್ವೆ ವಿಭಾಗಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಒಂದು ರೈಲ್ವೆ ವರ್ಕ್‌ಷಾಪ್ ಇರುತ್ತದೆ. ಈ ವರ್ಕ್‌ಷಾಪಿನಲ್ಲಿ ಒಂದು 'ಸಾಮಿಲ್' ವಿಭಾಗವಿದೆ. ಇದರಲ್ಲಿ ಹಿಂದೆ 100 ಕ್ಕೂ ಹೆಚ್ಚು ಮಂದಿ ಕೆಲಸಮಾಡುತ್ತಿದ್ದುದನ್ನು ಈಗ ಕೇವಲ 28 ಜನರು ಮಾತ್ರ ಕೆಲಸ ಮಾಡುವ ಸ್ಥಿತಿಗೆ ವರ್ಕ್‌ಷಾಪಿನ ಜನರಲ್ ಮ್ಯಾನೇಜರ್‌ರವರು ಇಳಿಸಿದ್ದಾರೆ. ದಕ್ಷಿಣ ವಿಭಾಗದ ಜನರಲ್‌ಮ್ಯಾನೇಜರ್‌ರವರು ಈಗ ಈ 'ಸಾಮಿಲ್' ವಿಭಾಗವನ್ನು ಇಲ್ಲಿಂದ ಗೋಲ್ಡನ್‌ರಾಕ್ ವರ್ಕ್‌ಷಾಪಿಗೆ ವರ್ಗಾಯಿಸುವ ಅಲ್ಲಿಯನ್ನು ಹೊರಡಿಸುವ ಯೋಜನೆಗಳನ್ನು ಪ್ರತಿಭಟಿಸುವ ಸಲುವಾಗಿ ತಾ. 29-2-80 ರಂದು ರೈಲ್ವೆ ಕಾರ್ಮಿಕರು ಪ್ರತಿಭಟನಾ ಪ್ರದರ್ಶನವನ್ನು ನಡೆಸಿ ವರ್ಕ್‌ಷಾಪಿನ ಮ್ಯಾನೇಜರ್‌ರವರಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಿದರು. ವಿವಿಧ ಸಂಘದವರು ಸಹಕರಿಸಿದ್ದರು. ಪ್ರದರ್ಶನಕಾರರನ್ನು ಉದ್ದೇಶಿಸಿ ಶ್ರೀಗಳಾದ ಈಶ್ವರ, ವೆಂಕಟೇಷ್ ಮತ್ತು ಸಿ. ಐ. ಟಿ. ಯು. ವಿನ ಪರವಾಗಿ ಕಾಂ. ಎಂ. ಎನ್. ಉಗ್ರಪ್ಪನವರು ಭಾಷಣ ಮಾಡಿದರು.

○

ಚೆಟ್ಟಳ್ಳಿಯಲ್ಲಿ ಬಹಿರಂಗ ಸಭೆ

ಕೊಡಗು ಜಿಲ್ಲೆಯ ಜನರಲ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.) ಆಶ್ರಯದಲ್ಲಿ ಚೆಟ್ಟಳ್ಳಿಯ ತೋಟಗಾರಿಕಾ ಸಂಶೋಧನಾ ಕೇಂದ್ರದ 120 ಕಾರ್ಮಿಕರು 18-2-1980 ರಿಂದ ನಡೆಸುತ್ತಿರುವ ಹೋರಾಟಕ್ಕೆ ಸಾರ್ವಜನಿಕರ ಬೆಂಬಲವನ್ನು ಕೋರಲು 2-3-80ರಂದು ಚೆಟ್ಟಳ್ಳಿಯಲ್ಲಿ ಬಹಿರಂಗ ಸಭೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಐ. ಆರ್. ಅಪ್ಪಣ್ಣ, ಸಹಕಾರ್ಯದರ್ಶಿ ಕಾಂ. ಉದಯಕುಮಾರ್, ಯೂನಿಯನ್ನಿನ ಕಾರ್ಯಕರ್ತರಾದ ಕಾಂ ದಿವಾಕರನ್ ಮತ್ತು ಕಾಂ ಕರ್ಪಸ್ವಾಮಿ ಮಾತನಾಡಿದರು. ಕೊಡಗಿನ ಕಾಂಗ್ರೆಸ್ (ಯು) ಮುಖಂಡರಾದ ಶ್ರೀ ಸಿ. ಅಬ್ದುಲ್ಲಾ ಮತ್ತು ಯುವಕ ಕಾಂಗ್ರೆಸ್‌ನ ಜಿಲ್ಲಾ ಸಂಚಾಲಕ ಶ್ರೀ ರಮೇಶ್ ಅವರು ಮಾತನಾಡಿ, ಚೆಟ್ಟಳ್ಳಿಯ ಫಾರಂ ಕೆಲಸಗಾರರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಸಭೆಯಲ್ಲಿ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಮತ್ತು ಪೋಲೀಸ್ ಪಕ್ಷಪಾತ ಧೋರಣೆಯನ್ನು ಖಂಡಿಸಲಾಯಿತು.

●

ದಕ್ಷಿಣ ಕನ್ನಡ ಜಿಲ್ಲಾ ಸಿ. ಐ. ಟಿ. ಯು. ನ ಎರಡನೇ ಸಮ್ಮೇಳನ

ತಾ. 14-2-1980 ರಂದು ದಕ್ಷಿಣ ಕನ್ನಡ ಜಿಲ್ಲೆ ಸಿ. ಐ. ಟಿ. ಯು. ಸಂಘಟನಾ ಸಮಿತಿಯ ಸಭೆಯು ಕಾಂ. ಬಿ. ಕೊರಗಪ್ಪ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಜಿಲ್ಲೆಯ ಎರಡನೇ ಸಿ. ಐ. ಟಿ. ಯು. ಸಮ್ಮೇಳನವನ್ನು ಮಾರ್ಚಿ ತಿಂಗಳ ತಾ. 23, 24 ಮತ್ತು 25 ರಂದು ಮಂಗಳೂರಿನಲ್ಲಿ ಜರಗಿಸಬೇಕೆಂದು ತೀರ್ಮಾನಿಸಲಾಯಿತು.

23 ಮತ್ತು 24ರಂದು ಪ್ರತಿನಿಧಿ ಸಭೆ, 25 ರಂದು ಬಹಿರಂಗ ಸಭೆಯನ್ನು ಜರುಗಿಸಬೇಕೆಂದು ನಿರ್ಣಯಿಸಲಾಯಿತು.

ಕಾಂ. ಪಿ. ರಾಮಚಂದ್ರರಾವ್ ಅಧ್ಯಕ್ಷರಾಗಿಯೂ, ಕಾಂ. ಕೆ. ಮೊಹಬ್ಬ ಕಾರ್ಯದರ್ಶಿಯಾಗಿರುವ 45 ಮಂದಿಯ ಸ್ವಾಗತ ಸಮಿತಿಯನ್ನು ರಚಿಸಲಾಯಿತು.

ಸಮ್ಮೇಳನದ ಮಹತ್ವವನ್ನು ಮತ್ತು ಇಂದಿನ ಪರಿಸ್ಥಿತಿಯಲ್ಲಿ ಮಜೂರ ವರ್ಗದ ಕರ್ತವ್ಯವನ್ನು ಕಾಂ. ಪಿ. ರಾಮಚಂದ್ರರಾವ್ ವಿವರಿಸಿದರು.

○

ಕೋಲಾರಕ್ಕೆ ಕೈಗಾರಿಕೆ ಬೇಕು

ಸ್ವಾತಂತ್ರ್ಯ ಬಂದಾಗಿನಿಂದಲೂ ಹಿಂದುಳಿದ ಪ್ರದೇಶವಾಗಿಯೇ ಉಳಿದಿರುವ ಕೋಲಾರ ನಗರಕ್ಕೆ ಐ.ಟಿ.ಐ. ಅಥವಾ ಎನ್. ಜಿ. ಇ. ಎಫ್. ನಂತಹ ಒಂದು ಕಾರ್ಖಾನೆ ಅನಿವಾರ್ಯವಾಗಿದೆಯೆಂದು ತಾ. 25-2-80ರಂದು ಸೇರಿದ್ದ ಯುವಜನ ಸಂಘ ಒತ್ತಾಯಪಡಿಸಿದೆ. ಸಭೆಯ ಅಧ್ಯಕ್ಷತೆಯನ್ನು ಕಾಂ. ಆರ್. ವೆಂಕಟರಾಮಯ್ಯನವರು ವಹಿಸಿದ್ದರು.

ಕೋಲಾರ ನಗರದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಬೇಕು, ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸಹಾ ಸ್ಥಾಪಿಸಬೇಕೆಂದು ಸಭೆ ಸರ್ಕಾರಕ್ಕೆ ಒತ್ತಾಯಪಡಿಸಿದೆ.

ನಗರದ ನೀರಿನ ಅಭಾವವನ್ನು ನೀಗಲು ಕಾವೇರಿ, ಪಾಲಾರ್ ನದಿಗಳಿಂದ ಹಾಗೂ ಮಾರ್ಕಂಡೇಯ ಕೆರೆಯಿಂದ ನೀರು ತರಲು ತುರ್ತುಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಿದ ಸಭೆ, ಬೇಡಿಕೆಗಳ ಈಡೇರಿಕೆಗಾಗಿ ಶೀಘ್ರದಲ್ಲಿಯೇ ಚಳುವಳಿಯನ್ನು ಪ್ರಾರಂಭಿಸುವುದೆಂದು ತಿಳಿಸಿದೆ.

○

ಶಿರಸಿಯಲ್ಲಿ ಹದಿನೇಳರಂದು ಸಭೆ

ಇಂದಿರಾ ಸರ್ಕಾರ ಬಂದು ಎಷ್ಟೋ ದಿನಗಳಾದರೂ ಸೌದೆ, ಸೀಮೆಎಣ್ಣೆ, ಸಕ್ಕರೆ, ಖಾದ್ಯತೈಲ ಮುಂತಾದ ಅಗತ್ಯ ವಸ್ತುಗಳ ಬೆಲೆ ದಿನದಿನಕ್ಕೆ ಏರುತ್ತಿದೆ. ಇದನ್ನು ಪ್ರತಿಭಟಿಸಲು ಮತ್ತು ವಸ್ತುಗಳು ನ್ಯಾಯ ಬೆಲೆಯಲ್ಲಿ ಸಿಗುವಂತೆ ಮಾಡಲು ಒತ್ತಾಯಿಸಲು ಸಾರ್ವಜನಿಕ ಸತ್ಯಾಗ್ರಹವನ್ನು ರೂಪಿಸಲು ಶಿರಸಿಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆ ಮತ್ತು ತಾಲ್ಲೂಕು ರೈತಸಂಘವು ಯೋಜನೆಯನ್ನು ಹಾಕಿಕೊಂಡಿದೆ. ಈ ಬಗ್ಗೆ ಸಾರ್ವಜನಿಕ ಸಭೆಯೊಂದನ್ನು ಮಾರ್ಚಿ ಹದಿನೇಳರಂದು ಶಿರಸಿಯಲ್ಲಿ ಕರೆಯಲಾಗಿದೆ. ಈ ಸತ್ಯಾಗ್ರಹದಲ್ಲಿ ರೈತಕಾರ್ಮಿಕರು, ನಿರುದ್ಯೋಗಿ ತರುಣರು ತರುಣಿಯರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸುವಂತೆ ರೈತಸಂಘ ಮತ್ತು ಪಕ್ಷದ ಶಾಖೆಗಳು ಮನವಿ ಮಾಡಿವೆ.

●

ಎಸ್ಟೇಟ್ ನೌಕರರ ಮನವಿ

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಪಡಿನ್ಯಾರೇ ತಲೆಕ್ಕಲ್ ಎಸ್ಟೇಟಿನ (ಕುಂಬೂರು) ತೋಟದಲ್ಲಿ ಕೆಲಸಮಾಡುತ್ತಿರುವ ನೌಕರರು ತಮಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಹಿರಿಯ ಪೋಲೀಸ್ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಸರ್ಕಾರ ನಿಗದಿ ಮಾಡಿರುವ ಕೂಲಿಗಿಂತ ಕಡಿಮೆ ಕೊಡುತ್ತಿರುವುದು, ಆ ಬಗ್ಗೆ ಪ್ರತಿಭಟನೆ ಮಾಡಿದ್ದಕ್ಕೆ ಪೋಲೀಸರು ಠಾಣೆಗೆ ಕರೆದೊಯ್ದು ಕಿರುಕುಳ ಕೊಟ್ಟಿರುವುದು, ಕಾರ್ಮಿಕ ನಾಯಕರಾದ ಕಾಂ. ಕುಟ್ಟಪ್ಪನವರನ್ನು ಎಸ್ಟೇಟಿನ ವಾಚ್‌ಮನ್ ಅವರು ಥಳಿಸಿರುವುದು, ಈ ವಿಚಾರಗಳನ್ನು ಮನವಿಯಲ್ಲಿ ಪರಿಶೀಲಿಸುವಂತೆ ಕೋರಲಾಗಿದೆ.

○

ಗೇಣಿದಾರನ ಮೇಲೆ ಹಲ್ಲೆ

ಕೋಲಾರ ತಾಲ್ಲೂಕಿನ ಹುತ್ತೂರುಹೋಬಳಿನೆರ್ನಹಳ್ಳಿಗ್ರಾಮದ ವಾಸಿಯಾದ ಬಿ. ವೆಂಕಟಗಿರಿಯಪ್ಪ ಅವರ ಮೇಲೆ ಭೂಮಾಲೀಕರ ಪರ ಹಿಡಿದ ಜನರಾದ ಶಂಕರಪ್ಪ, ರಾಮಪ್ಪ ಮತ್ತು ಬೈರಪ್ಪ ಅವರು ಅಮಾನುಷ ಹಲ್ಲೆ ನಡೆಸಿದ್ದಾರೆ. ಅಕ್ಕಿಯಮ್ಮ ಎಂಬ ಭೂಮಾಲೀಕರ ನಾಲ್ಕು ಎಕರೆ ಜಮೀನಿಗೆ 15 ವರ್ಷದಿಂದ ಗೇಣಿದಾರರಾಗಿದ್ದ ವೆಂಕಟಗಿರಿಯಪ್ಪನವರ ಪರವಾಗಿ ಭೂನ್ಯಾಯ ದಾವೆಯು ಉಚ್ಚನ್ಯಾಯಾಲಯದಲ್ಲಿ ತೀರ್ಮಾನವಾಗಿರುವುದೇ ಈ ಹಲ್ಲೆಯ ಹಿನ್ನೆಲೆಯಲ್ಲಿದೆ ಎನ್ನಲಾಗಿದೆ. ಈ ಬಗ್ಗೆ ನೀಡಿದ ಪೋಲೀಸ್ ದೂರಿನಿಂದ ರಕ್ಷಣೆ ಸಿಗದೆ ಮತ್ತೆ ಹಲ್ಲೆ ನಡೆದಿದೆ.

○

ಬೀದರಿನಲ್ಲಿ ಸಾರ್ವಜನಿಕ ಹೋರಾಟಕ್ಕೆ ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೀದರ್ ಶಾಖೆಯು, ಸಕ್ಕರೆ, ಸೀಮೆ ಎಣ್ಣೆ ಮತ್ತಿತರ ಅಗತ್ಯ ವಸ್ತುಗಳ ನ್ಯಾಯ ಬೆಲೆ ವಿತರಣೆಯನ್ನು ಒತ್ತಾಯಿಸಲು "ಸಾರ್ವಜನಿಕ ಹೋರಾಟ"ಕ್ಕೆ ಕರೆ ಕೊಟ್ಟಿದೆ. ಪಕ್ಷದ ಶಾಖೆಯ ಕಾರ್ಯದರ್ಶಿ ಕಾಂ. ಸುಂದರರಾಜ್, ಕಾಂ ಸಂಗ್ರಾಮ್, ಶ್ರೀ ಶಿವಶೆಟ್ಟಿ ಮುಂತಾದವರನ್ನೊಳಗೊಂಡ ನಿಯೋಗವೊಂದು ಡೆಪ್ಯುಟಿ ಕಮೀಷನರ್ ಅವರನ್ನು ಭೇಟಿಮಾಡಿ ಬಿಕ್ಕಟ್ಟನ್ನು ಪರಿಹರಿಸುವಂತೆ ಕೋರಿದೆ.

ಕಾಳಸಂತೆಕೋರರು, ಲಾಭಕೋರರ ವಿರುದ್ಧ ಜನತೆಯನ್ನು ಸಂಘಟಿಸಲು ಸಾರ್ವಜನಿಕ ಸಮಿತಿಗಳನ್ನು ನೇಮಿಸಲು ಯೋಜಿಸಲಾಗಿದೆ. ಇದು ಇತರ ಸಮಸ್ಯೆಗಳ ಬಗ್ಗೆಯೂ ಹೋರಾಡಲಿದೆ.

○

ಸಿ. ಐ. ಟಿ. ಯು. ಸಂಘಗಳಿಂದ ಸೌಹಾರ್ದ ಬೇಡಿಕೆ ದಿನಾಚರಣೆ

(ಒಂದನೇ ಪುಟದಿಂದ)

ಎಲ್ಲಿಯವರೆಗೆ ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಈಗಿರುವಂಥ ಬಂಡವಾಳಶಾಹಿ ಭೂಮಾಲಕರ ಸರಕಾರಗಳನ್ನು ಕಿತ್ತುಹಾಕಿ ಶ್ರಮಜೀವಿಗಳ ಸರಕಾರ ಬರುವುದಿಲ್ಲವೋ ಅಲ್ಲಿಯವರೆಗೆ ಈ ದೇಶದಲ್ಲಿ ಸಮಾಜವಾದವನ್ನು ತರುವುದು ಸಾಧ್ಯವಿಲ್ಲವೆಂದರು.

ಪ್ರಾರಂಭದಲ್ಲಿ ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಕೌನ್ಸಿಲ್ ಕಾರ್ಯದರ್ಶಿ ಫೆದರ್‌ಲೈಟ್ ಶ್ರೀನಿವಾಸ್ ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ರೈತಸಂಘದ ಶಾಮಣ್ಣ ರೆಡ್ಡಿಯವರು ಎಲ್ಲರನ್ನೂ ವಂದಿಸಿದರು.

ಬಹಿರಂಗ ಸಭೆಗೆ ಮೊದಲು ನಗರದ ನಾನಾ ಮೂಲೆಗಳಿಂದ ವಿವಿಧ ಕಾರ್ಖಾನೆಗಳ ಕಾರ್ಮಿಕರು ಘೋಷಣೆಗಳನ್ನು ಕೂಗುತ್ತಾ ಸಿ. ಐ. ಟಿ. ಯು. ಬಾವುಟ ಹಿಡಿದು ಮೆರವಣಿಗೆಗಳನ್ನು ತಂದಿದ್ದರು.

ಮೈಸೂರಿನಲ್ಲಿ ಬೃಹತ್ ಕಾರ್ಯಕ್ರಮ

ಸಿ ಐ ಟಿ ಯು. ರಾಜ್ಯಸಮಿತಿಯ ತೀರ್ಮಾನದಂತೆ ಕಾಮಿಕರ ಸೌಹಾರ್ದ ದಿನಾಚರಣೆಯನ್ನು ಮೈಸೂರಿನಲ್ಲಿ ಆಚರಿಸಲಾಯಿತು.

ಇದರ ಅಂಗವಾಗಿ ತಾ. 8-3-80 ರಿಂದ 12-3-80ರವರೆಗೆ ಪ್ರತಿದಿನ ಸಂಜೆ 3-4 ಸಣ್ಣ ಸಭೆಗಳನ್ನು ನಗರದ ಮುಖ್ಯ ಕೇಂದ್ರಗಳಲ್ಲಿ, ಕಾರ್ಮಿಕರ ವಾಸಸ್ಥಳಗಳಲ್ಲಿ ಮಾಡಿ ದೇಶದ ರಾಜಕೀಯ ಪರಿಸ್ಥಿತಿಯನ್ನು, ರಾಜ್ಯದ ವಿವಿಧ ಪ್ರದೇಶಗಳಲ್ಲಿ ಕಾರ್ಮಿಕರು ನಡೆಸುತ್ತಿರುವ ದೀರ್ಘ ಹೋರಾಟಗಳನ್ನು, ಏರುತ್ತಿರುವ ಆಹಾರ ಪದಾರ್ಥಗಳ ಬೆಲೆಗಳಿಂದಾಗಿ ಜನಸಾಮಾನ್ಯರಿಗೆ ಉಂಟಾಗುತ್ತಿರುವ ಚಿತ್ರಹಿಂಸೆಗಳನ್ನು ವಿವರಿಸುತ್ತಾ ಇಂದಿರಾಗಾಂಧಿಯವರ ಸರ್ವಾಧಿಕಾರಿ ಪ್ರವೃತ್ತಿಯನ್ನು ಜನರಿಗೆ ಮನವರಿಕೆ ಮಾಡಿಕೊಡಲಾಗುತ್ತಿತ್ತು. ಈ ರೀತಿ 24 ಸಭೆಗಳನ್ನು ನಡೆಸಿ ಸುಮಾರು ಒಂದೂವರೆ ಸಾವಿರ ಜನರನ್ನು ಸಂಧಿಸಲಾಯಿತು. ಕರಪತ್ರಗಳನ್ನು ಹಂಚುವುದರ ಜೊತೆಗೆ ರಸ್ತೆ ಬರಹಗಳನ್ನು ಮಾಡಲಾಯಿತು.

ತಾ. 12-3-80 ರಂದು ನಗರದ ಮುಖ್ಯ ಬೀದಿಗಳಲ್ಲಿ ಕರಕುಶಲ ಕಾರ್ಮಿಕರು, ರೈಲ್ವೆ, ರೇಷ್ಮೆ, ಬೀಡಿ, ನಗರ ಸಮಿತಿ, ಮತ್ತಿತರ ಕಾರ್ಮಿಕರ ಬೃಹತ್ ಪ್ರದರ್ಶನವನ್ನೂ ನಡೆಸಲಾಯಿತು. ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ 12 ಘಂಟೆಯಿಂದ 5 ಗಂಟೆಯವರೆಗೆ ಧರಣಿ ಮುಷ್ಕರವನ್ನ ನಡೆಸಲಾಯಿತು. ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿ ಕಾರ್ಮಿಕ ವಿವಾದಗಳನ್ನೂ ಬಗೆಹರಿಸಬೇಕೆಂದು, ಆಹಾರ ಪದಾರ್ಥಗಳೂ ಅಲ್ಲದೆ ಇತರ ಅಗತ್ಯ ವಸ್ತುಗಳನ್ನು ಅಗ್ಗದ ದರದಲ್ಲಿ ಜನಸಾಮಾನ್ಯರಿಗೆ ವಿತರಣೆ ಮಾಡುವಂತೆ ತುರ್ತು ಕಾರ್ಯಗಳನ್ನು ನಡೆಸಬೇಕೆಂದೂ ಕೇಳಿಕೊಳ್ಳುವುದರ ಜೊತೆಗೆ ಉಗಾದಿ ಹಬ್ಬಕ್ಕೆ ಪ್ರತಿ ರೇಷನ್ ಕಾರ್ಡಿಗೆ 5 ಕೆ. ಜಿ. ಸಕ್ಕರೆಯನ್ನು ವಿತರಣೆ ಮಾಡಬೇಕೆಂದು ಕೇಳಿಕೊಳ್ಳಲಾಯಿತು. ಜಿಲ್ಲಾಧಿಕಾರಿಗಳೊಂದಿಗೆ ನಡೆದ ಚರ್ಚೆಯಲ್ಲಿ ಕಾಮ್ರೇಡ್‌ಗಳಾದ ಎಂ. ಎನ್. ಉಗ್ರಪ್ಪ, ಎಂ. ಶೇಖರ್, ಸಿ. ಕೆ. ಮೋಹನ್, ಶಿವೇಗೌಡ, ಮಹದೇವ್ ಮತ್ತು ಮಹಮ್ಮದ್ ಇಸ್ಮಾಯಿಲ್ ಮುಂತಾದವರು ಭಾಗವಹಿಸಿದ್ದರು.

●

ದೀರ್ಘ ಹೋರಾಟದ ಯಶಸ್ವಿ ಮುಕ್ತಾಯ

(ಒಂದನೇ ಪುಟದಿಂದ)

ಟದಲ್ಲಿ ಕೊನೆಗೂ ತೃಪ್ತಿಕರವಾದ ತಾತ್ಕಾಲಿಕ ಪರಿಹಾರ ದೊರೆಯುವಂತಾಯಿತು. ಈ ಹೋರಾಟದ ಮುಖಂಡತ್ವದಲ್ಲಿ ಕಾಂ. ಆರ್. ಜಿ. ಸ್ಥಳೇಕರ ಅವರು ಮತ್ತು ಕಾಂ. ಜಿ.ವಿ. ಪವಾರ್ ಮತ್ತು ಇತರ ಸಿ ಐ ಟಿ ಯು ಮುಂದಾಳು ಹಾಗೂ ಕಾರ್ಯಕರ್ತರುಗಳದ್ದೆ ಮುಖ್ಯ ಪಾತ್ರವಿತ್ತು.

ಒಪ್ಪಂದದ ಮುಖ್ಯಾಂಶಗಳು :

ಒಪ್ಪಂದದ ಪ್ರಕಾರ ಪ್ರತಿಯೊಬ್ಬ ಕಾರ್ಮಿಕನಿಗೆ ಸುಮಾರು ಸರಾಸರಿ ರೂಪಾಯಿ 125 ರಷ್ಟು ತಿಂಗಳಿಗೆ ಹೆಚ್ಚಿಗೆ ದೊರೆಯುವುದು; ಕನಿಷ್ಟ ವೇತನವು ರೂ. 308ರಿಂದ ಸುಮಾರು ರೂ. 425ರಷ್ಟು ಆಗುವುದು; ಇದು ಈಗಿನ ಬೆಲೆಸೂಚ್ಯಂಕದ ಆಧಾರದಲ್ಲಿರುವುದು. ಈಗಿನ ಬೆಲೆಸೂಚ್ಯಂಕದ ಆಧಾರದಲ್ಲಿ ರೂ. 1.30ರ ವೇರಿಯೇಬಲ್ ಡಿ ಎ (Variable DA) ಕೊಡುವುದರ ಮೂಲಕ ಬೆಲೆ ಏರಿಕೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಹಂಗಾಮಿ ಕಂಟ್ರಾಕ್ಟ್ ಕಾರ್ಮಿಕರಿಗೆ (Contract Casual Workers) ದಿನವೊಂದರ ಕನಿಷ್ಟ ವೇತನ ರೂಪಾಯಿ 5 ಇರುವುದು ರೂ. 8ಕ್ಕೆ ಏರುವುದು. ಶೇಕಡಾ 75 ರಷ್ಟು ಇರುವ ಖಾಯಂ ಕಂಟ್ರಾಕ್ಟ್ ಕಾರ್ಮಿಕರಿಗೆ (Contract Regular Workers) ಕನಿಷ್ಟ ಕೂಲಿ ದಿನವೊಂದರ ರೂ. 8.70 ಇರುವುದು ರೂ. 11/-ಕ್ಕೆ ಏರುವುದು. ಜನವರಿ 1, 1981 ರಿಂದ ಇನ್ನೂ ಒಂದು ರೂಪಾಯಿಯ ಹೆಚ್ಚುವರಿಯನ್ನು ಮಾಡಲಾಗುವುದು.

ಒಪ್ಪಂದದ ಪ್ರಕಾರ ಕನಿಷ್ಟ ಮನೆ ಬಾಡಿಗೆ ಭತ್ಯ (HRA) ವು ರೂಪಾಯಿ 2 ಇರುವುದು ರೂಪಾಯಿ 15ಕ್ಕೆ ಏರುವುದು; ಗರಿಷ್ಟ ರೂಪಾಯಿ 30 ರಷ್ಟು ದೊರೆಯುವುದು. ಮುಷ್ಕರಕಾಲದ ಪರಿಹಾರವಾಗಿ ಪ್ರತಿಯೊಬ್ಬ ಕಾರ್ಮಿಕನಿಗೆ ರೂಪಾಯಿ 200 ಕೊಡಲಾಗುವುದು

ಸಂಪಾದಕೀಯ

(ಒಂದನೇ ಪುಟದಿಂದ)

20 ಅಂಶದ ಕಾರ್ಯಕ್ರಮದ ಜೊತೆಗೆ ತಮ್ಮದೇ ಆದ 12 ಅಂಶದ ಕಾರ್ಯಕ್ರಮವನ್ನು ಸಚಿವರು ಸೂಚಿಸಿರುತ್ತಾರೆ. ಇವೆಲ್ಲಾ ಬೂಟಾಟಿಕೆಯ ಒಣ ಆಶ್ವಾಸನೆಗಳಲ್ಲದೆ ನಿಜವಾಗಿ ಬಡತನ ನಿರ್ಮೂಲನದ ಕ್ರಮಗಳಲ್ಲ.

ಈ ಸರಕಾರದಿಂದ ನಮ್ಮ ರಾಜ್ಯದ ಸಮಸ್ಯೆಗಳು ಪರಿಹಾರವಾಗುವುದೆಂಬುದಾಗಲಿ, ಬಡತನ ನಿರ್ಮೂಲವಾಗುತ್ತದೆಂಬುದಾಗಲಿ, ಉದ್ಯೋಗ, ವಸತಿ, ವಿದ್ಯಾಭ್ಯಾಸ ಮುಂತಾದ ಸಮಸ್ಯೆಗಳು ನಿವಾರಣೆಯಾಗುವುದೆಂದಾಗಲಿ ನಿರೀಕ್ಷಿಸುವುದು ತಪ್ಪಾದೀತು. ಇದೊಂದು ಬಂಡವಾಳಶಾಹಿ ಭೂ-ಮಾಲಕರ ಸರಕಾರವೆಂಬುವನ್ನು ಬಜೆಟ್ ಸ್ಪಷ್ಟಪಡಿಸಿದೆ. ಸರ್ಕಾರದ ಪ್ರತಿಗಾಮಿ ಧೋರಣೆಗಳ ವಿರುದ್ಧ ಕಾರ್ಮಿಕರೂ, ರೈತರೂ, ಇತರ ಪ್ರಜಾಪ್ರಭುತ್ವವಾದಿಗಳೂ ಸಂಯುಕ್ತ ಹೋರಾಟ ನಡೆಸುವುದು ಅತ್ಯಗತ್ಯ. O

ಪಿಪ್ರಾದಲ್ಲಿ ನರವಧೆ

ರಕ್ತವನ್ನು ತಣ್ಣಗಾಗಿಸುವ ಮತ್ತೊಂದು ಹರಿಜನ ವಧೆ ಬಿಹಾರದಲ್ಲಿ ನಡೆದಿದೆ. ಪಟ್ನಾಗೆ 25 ಕಿ. ಮೀ. ದೂರದ ಪಿಪ್ರಾದಲ್ಲಿ ನಡೆದ ಈ ಭೀಕರ ನರವಧೆ ನಡೆದಿರುವುದೂ ಕೃಷಿವೇತನಗಳಿಗೆ ಸಂಬಂಧಿಸಿದ ಹಾಗೇ. ಆದರೆ ಈ ವಿಚಾರವನ್ನು ಮುಚ್ಚಿಟ್ಟು ಕೊಲೆಗಳು ನಡೆದಿರುವುದು ಬೇರೆ ಕಾರಣಗಳಿಗೆ ಎಂದು ನಂಬಿಕೆ ಹುಟ್ಟಿಸುವ ಪ್ರಯತ್ನಗಳು ಆಗುತ್ತಿವೆ. ಹರಿಜನರು ಮತ್ತು ಇತರ ಕೃಷಿಕಾರ್ಮಿಕರಲ್ಲಿ ಬೆಳೆಯುತ್ತಿರುವ ಹಕ್ಕುಗಳ ಪ್ರಜ್ಞೆಯನ್ನು ಹತ್ತಿಕ್ಕಲು ಭೂಮಾಲೀಕರು ಈ ಕೊಲೆಗಳನ್ನು ಏರ್ಪಾಟು ಮಾಡುತ್ತಿದ್ದಾರೆ.

ಪಿಪ್ರಾದಲ್ಲಿ ಕೃಷಿಕೆಲಸಗಾರರಿಗೆ ಸಿಗುತ್ತಿರುವ ವೇತನ ತೀರ ಕಡಿಮೆ, ಸರ್ಕಾರ ನಿಗದಿ ಮಾಡಿರುವ ಕನಿಷ್ಠ ಐದು ರೂಪಾಯಿ ಕೂಲಿ ಸಹ ಅವರಿಗೆ ಸಿಗುತ್ತಿಲ್ಲ. ಅವರಿಗೆ ಕೇವಲ ಒಂದು ಸೇರು ಕೇಸರಿ ಧಾನ್ಯ (ಇದು ತೀರ ಅಪಾಯಕಾರಿ ಧಾನ್ಯ) ಮತ್ತು ಒಂದು ಸೇರು ಸತ್ತುಧಾನ್ಯ ಕೊಡಲಾಗುತ್ತದೆ. ಅವರೆಲ್ಲ ತಮಗೆ ಸರಿಯಾದ ಕೂಲಿ ಕೊಡಬೇಕೆಂದು ಹೋರಾಡುತ್ತಿದ್ದರು. ಈ ರೀತಿಯ ಹಲ್ಲೆ ನಡೆಯಬಹುದೆಂದೂ ಅವರು ಶಂಕಿಸುತ್ತಿದ್ದರು.

ಬಿಹಾರದಲ್ಲಿ ನಡೆದಿರುವ ಘಟನೆಗಳಲ್ಲಿ ಒಂದಲ್ಲ ಒಂದು ಭೂಮಿ ಅಥವಾ ವೇತನಗಳಿಗೆ ಸಂಬಂಧಿಸಿರುವುದೇ ಆಗಿದೆ. ಆದರೆ ಹೆಚ್ಚಿನವಕ್ಕೆ ಜಾತಿಯ ಬಣ್ಣ ತೊಡಿಸಲಾಗುತ್ತಿದೆ. ಬಿಹಾರದ ಜನತಾ ಸರ್ಕಾರವನ್ನು ವಿಸರ್ಜಿಸಿ ಇಂದಿರಾಗಾಂಧಿಯವರು ಕೇಂದ್ರಾಡಳಿತವನ್ನು ತಂದಮೇಲೂ ದಲಿತರ ಮೇಲೆ ಇಂಥ ಆಕ್ರಮಣಗಳು ನಡೆಯುತ್ತಿವೆ ಎನ್ನುವುದು ಗಮನಾರ್ಹವಾದುದು. ●

ವೈಜ್ಞಾನಿಕ ಮನೋಗತಿಯನ್ನು ಬೆಳೆಸಲು ವಿದ್ಯಾರ್ಥಿಗಳಿಗೆ ಕರೆ

ವಿದ್ಯಾರ್ಥಿಗಳ ಸಮಸ್ಯೆಗಳೆಂದರೆ ನಮ್ಮ ಸಮಾಜದ ಸಮಸ್ಯೆ. ವರ್ಗ ಮತ್ತು ಜಾತಿಯ ಪದ್ಧತಿಗಳಿಂದ ಕೂಡಿದ ನಮ್ಮ ದೇಶದ ಸಮಾಜ ವ್ಯವಸ್ಥೆಯು ಕುಸಿಯುತ್ತಲಿದೆ. ವಿದ್ಯಾರ್ಥಿಗಳು ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿ, ತಮ್ಮ ಸಮಸ್ಯೆಗಳಿಗೆ ಪರಿಹಾರವು ದೊರಕಬೇಕಾದರೆ ಎಲ್ಲಾ ಶೋಷಿತ ಜನಾಂಗದ ಸಮಸ್ಯೆಗಳ ಪರಿಹಾರವಾಗಬೇಕೆಂದು ತಿಳಿಯಬೇಕು. ತಮ್ಮ ಸಮಸ್ಯೆಗಳ ಬಗ್ಗೆ ಸಂಘಟಿಸಿ ಹೋರಾಡುತ್ತಾ ಎಲ್ಲಾ ಶೋಷಣೆಗೊಳಗಾದ ಜನರೊಂದಿಗೆ ಸೇರಿ ಸಮಾಜ ವ್ಯವಸ್ಥೆಯನ್ನು ಬದಲಾಯಿಸುವತ್ತ ಮುನ್ನಡೆಯಬೇಕೆಂದು ರಾಯಚೂರು ನಗರದ ಎಸ್. ಎಫ್. ಐ. ಸರ್ವಸದಸ್ಯರ ಸಭೆಯನ್ನುದ್ದೇಶಿಸಿ ಯುವಕ ಮುಂದಾಳು ಕಾಂ. ಜಿ ವಿ. ಶ್ರೀರಾಮರೆಡ್ಡಿಯವರೂ, ಸಿ.ಪಿ.ಐ. (ಎಂ) ರಾಜ್ಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರೂ ಕರೆ ಇತ್ತರು. 6-3-80ರಂದು ಬೆಳಿಗ್ಗೆ 8 ಗಂಟೆಗೆ ಸೇರಿದ್ದ ಸಭೆಯಲ್ಲಿ ಸುಮಾರು ನೂರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾಂ. ಪುರುಷೋತ್ತಮ ಸಂಘಟನೆ ಬಗ್ಗೆ ವಿವರಿಸಿದರು.

●

ಸಹಕರಿಸಿ

ಕೆಲವು ಯಾಂತ್ರಿಕ ತೊಂದರೆಗಳಿಂದ ಪತ್ರಿಕೆ ಹೊರಬರುವುದು ತಡವಾದುದಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ. ಮುಂದೆ ಪತ್ರಿಕೆ ಸರಿಯಾದ ಸಮಯಕ್ಕೆ ಹೊರಬರುವಂತೆ ಏರ್ಪಾಡು ಮಾಡಲಾಗುತ್ತದೆ. ಓದುಗರು ನಮ್ಮೊಂದಿಗೆ ಸಹಕರಿಸಬೇಕೆಂದು ಕಳಕಳಿಯಿಂದ ವಿನಂತಿಸುತ್ತೇವೆ.

ಸಂಪಾದಕ ಮಂಡಳಿ

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT